
ನವಸಾಕ್ಷರ ಪುಸ್ತಕ ಮಾಲೆ ೧೦

ಕಾಗದ

ಎಂ. ಚಂದ್ರಶೇಖರಯ್ಯ





ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಪಾದಕ ಸಮಿತಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೧೦

ಕಾಗದ

ಎಂ. ಚಂದ್ರಶೇಖರಯ್ಯ



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

KAGADA : By M. Chandrashekaraiah. Published by The Director, Prasaranga, Kannada University, Hampi - 583 211, KARNATAKA.
First Impression 1994, Pp. ii + 26, Rs. 8.00.


ಸಂಯೋಜನಾಧಿಕಾರಿ
ಎಚ್.ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಠಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102





ಕಾಗದ

ರಂಗಪ್ಪ ತಡವಾಗಿ ಮನೆಗೆ ಬಂದ. ಹೆಂಡತಿ ಕೋಮಲ ಕಾಯುತ್ತಿದ್ದಳು. 'ಯಾಕೆ ತಡ' ಎಂದು ಕೇಳಿದಳು. 'ಇವತ್ತು ಕಾಗದದ ಬಣ್ಣ ಕೆಟ್ಟಿತ್ತು. ಸರಿಮಾಡೋಕೆ ಇಷ್ಟು ತಡ ಆಯ್ತು' ಎಂದ. ಪೇಪರ್ ಎತ್ತಿಕೊಂಡು ಗಾಳಿ ಬೀಸಿಕೊಂಡ.

ಅವನು ಕಾಗದ ಕಾರ್ಖಾನೆಯಲ್ಲಿ ಹತ್ತು ವರ್ಷದಿಂದ ದುಡಿಯುತ್ತಿದ್ದ. ಅವನು ಪ್ರಯೋಗ ಶಾಲೆಯಲ್ಲಿ ಕಾಗದ ಹದ ಹಿಡಿಯುವ ತಜ್ಞ. ಕೋಮಲ ಕಾಫಿ ಲೋಟದೊಡನೆ ಹತ್ತಿರ ಬಂದು 'ರೀ' ಅಂದಳು. 'ಏನೇ' ಎಂದು ಬಾಯಿ ತೆರೆದ. 'ಇವತ್ತು ಕಾಗದ ಬಂದಿದೆ ಊರಿಂದ. ಸೋಮವಾರ ನನ್ನ ಮೂರು ಜನ ತಮ್ಮಂದಿರೂ ಬರುತ್ತಾರೆ. ಅವರು ನಿಮ್ಮ ಕಾರ್ಖಾನೆ ನೋಡಬೇಕಂತೆ. ರಮೇಶ ಅದೇನೋ ಕಾಗದ ತಯಾರಿಕೆ ಬಗ್ಗೆ ಪ್ರಬಂಧ ಬರೀಬೇಕಂತೆ. ಎಲ್ಲ ವಿವರವಾಗಿ ತಿಳಿಯಬೇಕಂತೆ. ಗೊತ್ತಾಯಿತೆ' ಎಂದಳು.

ರಂಗಪ್ಪ ಬೆಚ್ಚಿಬಿದ್ದ. ರಮೇಶ, ಸುರೇಶ, ಗಣೇಶ ಮಹಾ ತರಲೆಗಳು. ಬರೀ ವಟವಟ ಅಂತ ಪ್ರಶ್ನೆ ಹಾಕುತ್ತಿದ್ದರು. ಕಳೆದ ಬೇಸಿಗೆ ರಜದಲ್ಲಿ ಕಬ್ಬಿಣದ ಕಾರ್ಖಾನೆ





ಕಾಗದ ತಯಾರಿಸುವ ವಿಧಾನ.

ನೋಡಲು ಬಂದಿದ್ದರು. ಭದ್ರಾವತಿ ತುಂಬಾ ರಂಗಪ್ಪನನ್ನು ಸುತ್ತಾಡಿಸಿದ್ದರು. ರಂಗಪ್ಪ ರಗಳೆಯೇ ಬೇಡ ಎಂದು, 'ನಂಗೆ ರಜ ಇಲ್ಲ ಕಣೆ ಆಗೋಲ್ಲ' ಎಂದ. 'ನಿಮ್ಮ ಕಾರ್ಖಾನೆ ತೋರಿಸೋಕೆ ಎಷ್ಟು ಚೌಕಾಸಿ. ಅವರೇನು ದಿನಾ ಬರುತ್ತಾರಾ? ನಿಮ್ಮ ತಮ್ಮ, ತಂಗಿ ಮಕ್ಕಳು ಬಂದ್ರೆ ಕುಣಿದಾಡಿ ತೋರಿಸುತ್ತೀರಾ' ಎಂದು ಮುನಿಸಿಕೊಂಡಳು. ರಮೇಶ ಎಸ್ ಎಸ್ ಎಲ್ ಸಿ ಓದುತ್ತಿದ್ದ. ಅವನು ಗಂಭೀರ ಸ್ವಭಾವದ ಹುಡುಗ. ಸುರೇಶ, ಗಣೇಶ ಮಹಾ ಚುರುಕು. ತರಲೆಗಳು. ರಂಗಪ್ಪ ಏನೋ ಚಿಂತಿಸುತ್ತಿದ್ದ. ನಾಲ್ಕು ವರ್ಷದ ಮಗಳು ಕೋಕಿಲ ಪರ್‍ರನೆ ಕಾಗದ ಹರಿದು ಚೂರು ಮಾಡುತ್ತಿದ್ದಳು. ಕೋಮಲ ಚೂರುಗಳನ್ನು ಕಸಿದುಕೊಂಡು ಗದರಿದಳು. 'ನಿಮ್ಮಪ್ಪಂಗೆ ಕಾಗದ ಹಾಳುಮಾಡಿದ್ರೆ ಸಿಟ್ಟು ಕಣೆ. ಅದಕ್ಕೆ ಎಷ್ಟು ಬೆಲೆ ಏನು ಅಂತ ಲೆಕ್ಕ ಹಾಕುತ್ತಾರೆ'.

ರಂಗಪ್ಪ ಮನಸ್ಸಿನಲ್ಲೇ ಹುಸಿನಗೆ ನಕ್ಕ. ಹೌದು. ಕಾಗದದ ಬೆಲೆ ಇವರಿಗೇನು ಗೊತ್ತು. ಹತ್ತು ವರ್ಷ ಪ್ರಯೋಗಶಾಲೆಯಲ್ಲಿ ಅದರ ಬಣ್ಣ ಬೆಡಗು ತಿರುಳು ಬದಲಾವಣೆ ತಿಳಿದವನು. ರಾಸಾಯನಿಕ ಶಕ್ತಿಯಿಂದ ಆಗುವ ಪರಿವರ್ತನೆ ಬಗ್ಗೆ ಅಪಾರ ಅನುಭವ ಪಡೆದಿದ್ದ. ಅವನು ಹುಟ್ಟಿದ್ದು ದಟ್ಟ ಮಲೆನಾಡಿನ ಆಗುಂಬೆ ಹತ್ತಿರದ ಹಳ್ಳಿಯಲ್ಲಿ. ಅವನು ಹುಡುಗನಾಗಿದ್ದಾಗ ನೋಡಿದ ಕಾಡು ಅಲ್ಲಿ ಈಗ ಇರಲಿಲ್ಲ. ಬಿ.ಎಸ್ಸಿ ಪದವಿ ಓದುವಾಗ ಸಸ್ಯಶಾಸ್ತ್ರ ಅವನ ಪ್ರಿಯ ವಿಷಯವಾಗಿತ್ತು. ದೊಡ್ಡ ದೊಡ್ಡ ಮರಗಳಡಿ ಕುಳಿತು ಶಾಂತಿ ನೆಮ್ಮದಿ ಪಡೆದಿದ್ದ. ಎಂ.ಎಸ್ಸಿ ಓದುವಾಗ ರಸಾಯನ ಶಾಸ್ತ್ರ ಓದಿದ. ಕಾಡು ವಿರಳವಾಗಲು ಕಾಗದ ಕಾರ್ಖಾನೆ ಕಾರಣ ಎಂದು ಬೇಸರವಿತ್ತು. ಕೋಪವೂ ಇತ್ತು. ಅಂತರಂಗದಲ್ಲಿ ಕಾಡಿನ ಬಗ್ಗೆ ಪ್ರೀತಿ. ಉದ್ಯೋಗ ಮಾಡುವುದು ಕಾಡು ನುಂಗುವ ಕಾಗದ ಕಾರ್ಖಾನೆಯಲ್ಲಿ. ವಚನದ ಸಾಲೊಂದು ನೆನಪಾಯಿತು. ''ಎತ್ತಣ ಮಾಮರ, ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ''!

'ರಿ! ಎಲ್ಲಿದೀರ. ಕನಸು ಕಾಣ್ತಿದೀರೋ ಏನು. ನಾಲ್ಕು ಸಲ ಕೂಗಿದೆ. ಮಾತೇ ಇಲ್ಲ' ಎಂದು ಕೋಮಲ ಎಚ್ಚರಿಸಿದಳು. ರಂಗಪ್ಪ ಅಡುಗೆ ಏನೆಂದು ವಿಚಾರಿಸಿದ. 'ಜೋಳದ ರೊಟ್ಟಿ, ಕಳಲೆ ಪಲ್ಯ' ಎಂದಳು. ಬೆಚ್ಚಿಬಿದ್ದ. 'ನಿಂಗೆ

ತಲೆ ಕೆಟ್ಟಿದೆಯೇನೇ? ಕಳಲೆ ಕುಯ್ದು ಪಲ್ಯ ಮಾಡೋದು ಅಂದ್ರೆ ಏನು. ಆಂ! ಬಿದಿರಿನ ಕೂಸು ಕಣೆ ಅವು. ಪ್ರಾಣಿಗಳಿಗೆ ಕಾಡಿನಲ್ಲಿ ಆಸರೆ ಕೊಡೋ ಬಿದಿರನ ಎಳೆ ಹಸುಳೆಗಳು. ಅರಣ್ಯ ಇಲಾಖೆಯೋರಿಗೆ ಗೊತ್ತಾದ್ರೆ ನಿನ್ನ ಅರೆಸ್ಟ್ ಮಾಡ್ತಾರೆ. ನಾನು ಮಾತ್ರ ಒಲ್ಲೆನಪ್ಪ. ಅದರ ಪಲ್ಯ ಮಾಡಬೇಡಾಂತ ಎಷ್ಟು ಸಲ ಹೇಳಿದ್ದೇನೆ ಗೊತ್ತಾ? ಯಾವ ಮನೆ ಮುರುಕ ನಿನಗೆ ಅವನ್ನು ತಂದುಕೊಟ್ಟ' ಎಂದು ಗದರಿದ.


ಕೋಮಲ ತಣ್ಣಗೆ ಅವನ ಕಡೆ ನೋಡಿದಳು. ಅವಳು ಸ್ವಲ್ಪವೂ ಅಳುಕಿಲ್ಲದೆ ಮೂತಿ ಓರೆ ಮಾಡಿದಳು. ಬೆರಳು ಆಡಿಸುತ್ತ ಅಣಕಿಸಿದಳು "ಸುಮ್ಮನಿರ್ರಿ. ನಾನೂ ಕಂಡಿದೀನಿ. ಓಹೊಹೋ! ಪ್ರತಿದಿನ ನಿಮ್ಮ ಕಾರ್ಖಾನೆ ಐವತ್ತು ಲಾರಿ ಲೋಡು ಬೊಂಬು ನುಂಗುತ್ತೆ ಬಕಾಸುರನ ಹಾಗೆ. ನಿಮ್ಮ ಪ್ರಯೋಗ ಶಾಲೆಯಲ್ಲಿ ಅದರ ಲೆಕ್ಕಾನೇ ಬರೀತೀರಿ. ಪರಿಸರ ಪ್ರೇಮಿಗಳ ಸಂಘದ ಕಾರ್ಯದರ್ಶಿ ಬೇರೆ ಆಗಿದೀರ. ಎದ್ದು ಬನ್ನಿ. ಅದೂ ಆರಿ ಹಳಸೀತು".

ರಂಗಪ್ಪ ಉತ್ತರಿಸಲಿಲ್ಲ. ಹೆಂಡತಿಯ ಮಾತುಗಳಲ್ಲಿ ಸತ್ಯ ಎಷ್ಟಿರಬಹುದು ಎಂದು ಯೋಚಿಸಿದ. ಅಷ್ಟು ಹೊತ್ತಿಗೆ ಧ್ವನಿ ವರ್ಧಕದಲ್ಲಿ ಏನನ್ನೋ ಕೂಗುವ ಸದ್ದು ಕೇಳಿಸಿತು. ರಂಗಪ್ಪ ಬಾಗಿಲಿಗೆ ಬಂದು ಆಲಿಸಿದ. "ಭದ್ರಾವತಿ ನಗರದ ಮಹನೀಯರೇ, ಮಹಿಳೆಯರೇ, ನಾಳೆ ರಾತ್ರಿ ಎಂಟು ಗಂಟೆಗೆ ಅರಣ್ಯ ಮಂತ್ರಿ ಆಗಮಿಸಲಿದ್ದಾರೆ. ಅರಣ್ಯ ಕಾಪಾಡುವ ಬಗ್ಗೆ ಭಾಷಣ ಮಾಡಲಿದ್ದಾರೆ. ಪ್ರತಿಯೊಬ್ಬರೂ ತಪ್ಪದೆ ಭಾಗವಹಿಸಿ. ಸದವಕಾಶ ಕಳೆದುಕೊಳ್ಳಬೇಡಿ. ಕಾಡು ಬೆಳೆಸಿ ನಾಡು ಉಳಿಸಿ. ಮನೆ ಒಳಗೊಂದು ಮಗು. ಮನೆ ಹೊರಗೊಂದು ಮರ. ಜೈ ಕರ್ನಾಟಕ ಮಾತೆ" ರಂಗಪ್ಪ ಊಟಕ್ಕೆ ಎದ್ದ. ಕಳಲೆ ಪಲ್ಯ ರುಚಿಯಾಗಿತ್ತು. ಒಂದು ರೊಟ್ಟಿ ಜಾಸ್ತಿ ತಿಂದದ್ದು ನೋಡಿ ಕೋಮಲ ನಕ್ಕಳು.

ರಮೇಶ, ಸುರೇಶ, ಗಣೇಶ ಭಾನುವಾರ ರಾತ್ರಿಯೇ ಬಂದರು. ಊಟ ಆದಮೇಲೆ ರಮೇಶ ಕಾಗದದ ಹಾಳೆ ಹಿಡಿದು ರಂಗಪ್ಪನೆದುರು ಕುಳಿತ. "ಭಾವ, ನಾನು ಕಾಗದ ಕುರಿತು ಒಂದು ಪ್ರಬಂಧ ಬರೀಬೇಕಾಗಿದೆ. ವಿಷಯ, ಕಾಗದ ಕಾರ್ಖಾನೆಗಳಿಂದ

ಹಾನಿಯೋ ಪ್ರಗತಿಯೋ ಅಂತ. ನನಗೆ ಒಂದಿಷ್ಟು ವಿಷಯ ತಿಳಿಸಿ. ಈಗ ಬರೆದು ಕೊಳ್ಳುತ್ತೇನೆ. ಬೆಳಿಗ್ಗೆ ಕಾರ್ಖಾನೆ ತೋರಿಸಿ'' ಎಂದು ಕೇಳಿದ. ರಾಜ್ಯ ಮಟ್ಟದ ಒಂದು ಸ್ಪರ್ಧೆಗೆ ಅವನು ಭಾಗವಹಿಸಲಿದ್ದ. ''ನೀನೇನಾದರೂ ವಿಷಯ ಸಂಗ್ರಹಿಸಿದ್ದೀಯಾ'' ಎಂದು ರಂಗಪ್ಪ ಕೇಳಿದ. ರಮೇಶ ತನ್ನ ಕೈಲಿದ್ದ ಕಾಗದ ನೀಡಿದ. ಅದರಲ್ಲಿ ಒಂದಿಷ್ಟು ಮಾಹಿತಿಗಳಿದ್ದವು. ಅವು ಹೀಗಿದ್ದವು:

ನಮಗೆ ಗಾಳಿ, ಬೆಳಕು, ನೀರು ಬದುಕಲು ಬೇಕು. ಭಾಷೆ-ಬರಹವೂ ಬೇಕು. ಅವು ನಾಗರಿಕತೆಯ ಜಾಡು ಬದಲಿಸಿವೆ. ಮಾನವ ಲಿಪಿ ಕಲಿತ. ಮರಗಳ ಮೇಲೆ ಬರೆದ. ಎಲೆ, ಕಲ್ಲು, ಚರ್ಮ, ಸುಟ್ಟಮಣ್ಣು, ಬಂಡೆ-ಇಲ್ಲೆಲ್ಲಾ ಬರೆದ. ಕಾಗದ ಅವನಿಗೆ



ತಾಳೆ ಗರಿಗಳ ಕಟ್ಟುಗಳು

ಪ್ರಾಚೀನ ಕಾಲದಲ್ಲಿ ತಿಳಿದಿರಲಿಲ್ಲ. ಕಬ್ಬಿಣ, ಹಿತ್ತಾಳೆ, ತಾಮ್ರ ಇಂತಹ ಲೋಹಗಳ ಮೇಲೂ ಬರೆದ. ನಮ್ಮ ಪ್ರಾಚೀನ ಕೃತಿಗಳು ಹೆಚ್ಚಾಗಿ ಭೂರ್ಜಪತ್ರ, ತಾಳಪತ್ರಗಳಲ್ಲಿವೆ. ಭೂರ್ಜಪತ್ರ ಹೆಚ್ಚಾಗಿ ಹಿಮಾಲಯದಲ್ಲಿ ಬೆಳೆಯುತ್ತದೆ. ಈ ಮರದ ತೊಗಟೆ ಗಟ್ಟಿ.

ಬೇಗ ಪುಡಿಯಾಗುವುದಿಲ್ಲ. ಈ ಮರದ ತೊಗಟೆಯನ್ನು ಚೌಕಾಕಾರವಾಗಿ ಕತ್ತರಿಸುತ್ತಾರೆ. ಹದ ಮಾಡಿ ಬರವಣಿಗೆಗೆ ಉಪಯೋಗಿಸುತ್ತಾರೆ.

ತಾಳೆಗರಿ ಎಂಬುದು ಇನ್ನೊಂದು ಬಗೆಯ ಪತ್ರ. ನಮ್ಮ ಪ್ರಾಚೀನ ಸಾಹಿತ್ಯ ಈ ತಾಳೆಗರಿಯ ಹದ ಮಾಡಿದ ಎಲೆಗಳಲ್ಲಿ ದೊರೆತಿದೆ. ದಕ್ಷಿಣ ಭಾರತದಲ್ಲಿ ಈ ಮರಗಳು ಹೇರಳವಾಗಿವೆ. ಎಲೆಗಳು ಅಗಲವಾಗಿರುತ್ತವೆ. ನಾಲ್ಕು ಅಡಿಗಳವರೆಗೆ ಉದ್ದವಿರುತ್ತವೆ. ನಮ್ಮ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ ಇದರಲ್ಲೇ ಬರೆದಿದ್ದರು. ನೀರಲ್ಲಿ ಕುದಿಸಿ ಒಣಗಿಸಿ ಉಜ್ಜಿದ ಇದರ ಮೈ ನುಣುಪಾಗಿರುತ್ತದೆ. ಎಲೆ ಬೇಗ ಹಾಳಾಗುವುದಿಲ್ಲ. ಹೀಗೆ ಒಂದಿಷ್ಟು ಸಂಗತಿಗಳನ್ನು ಮುದ್ದಾದ ಅಕ್ಷರಗಳಲ್ಲಿ ರಮೇಶ ಬರೆದಿದ್ದ. ಇವೆಲ್ಲ ಕಾಗದಕ್ಕೆ ಬದಲಿಯಾಗಿ ಬಳಸಿದ ವಸ್ತುಗಳು ಎಂದು ಗುರುತು ಹಾಕಿದ್ದ. ಕಡತ ಮತ್ತು ಕಾಗದ ಎಂದು ಬರೆದು ಪ್ರಶ್ನಾರ್ಥಕ ಚಿಹ್ನೆ ಬಳಸಿದ್ದ.

ಅದನ್ನೂ ಗಮನಿಸಿದ ರಂಗಪ್ಪ, ಅವನು ಕೇಳುವ ಮೊದಲೇ ಹೇಳತೊಡಗಿದ. ಕಡತ ಅಂದ್ರೆ ಬಟ್ಟೆಯಲ್ಲಿ ತಯಾರು ಮಾಡುತ್ತಿದ್ದರು. ಇದು ಒಂದು ಅಡಿ ಅಗಲ ಇದ್ದು ಅನೇಕ ಅಡಿ ಉದ್ದ ಇರುತ್ತಿತ್ತು. ಗೌಡರು, ಪಟೇಲರು, ಪಾಳೆಯಗಾರರು, ಮಂತ್ರಿಗಳು ಇದರಲ್ಲಿ ಲೆಕ್ಕ ಬರೆದಿಡುತ್ತಿದ್ದರು. ಇದಕ್ಕೆ ಕಪ್ಪು ಮಸಿ ಹಚ್ಚಿದ್ದರಿಂದ ಅಕ್ಷರಗಳು ಎದ್ದು ಕಾಣುತ್ತಿದ್ದವು. ಬಳಪ ಬಳಸಿ ಬರೆದ ಕಡತ ಕೆಲವು ಮಠಗಳಲ್ಲಿ, ದೇವಾಲಯಗಳಲ್ಲಿ ನಮಗೆ ಸಿಕ್ಕಿವೆ - ಎಂದು ರಂಗಪ್ಪ ತಿಳಿಸಿದ.

ರಮೇಶ ರಂಗಪ್ಪನ ಮಾತು ಆಲಿಸುತ್ತಿದ್ದ. ಸುರೇಶ ಗಣೇಶನನ್ನು ತಿವಿದು ಗೋಡೆಯ ಮೇಲಿದ್ದ ಭಾವಚಿತ್ರ ಒಂದನ್ನು ತೋರಿಸುತ್ತಿದ್ದ. ಗಣೇಶ ಮಿಕಿ ಮಿಕಿ ನೋಡಿ ತಿಳಿಯದೆ ''ಭಾವ ಅದು ಯಾರು'' ಎಂದು ತೋರಿಸಿ ಪ್ರಶ್ನೆ ಶುರುಮಾಡಿದ.

''ನಿನಗೆ ಗೊತ್ತಾಗೋಲ್ಲ ಸುಮ್ಮನಿರು''

''ಹೇಳಿ ಭಾವ. ಅದ್ಯಾಕೆ ಅವನು ತಲೆಗೆ ಬಟ್ಟೆ ಸುತ್ಕೊಂಡಿದಾನೆ. ಮರದ ಬೊಡ್ಡೆ ಹಿಡಿದು ಅವಚಿ ಕೊಂಡಿದ್ದಾನೆ?''



ಮಲಿನವಾಗಿ ಹರಿಯುತ್ತಿರುವ ನದಿಯನ್ನು ಕೋಮಲ, ರಮೇಶ, ಸುರೇಶ, ಗಣೇಶ ನೋಡುತ್ತಿರುವುದು

"ಅವನು ಸುಂದರಲಾಲ್ ಬಹುಗುಣ ಅಂತ"

"ಅವನು ನಿಮ್ಮ ಸ್ನೇಹಿತನಾ?"

"ತಲೆಹರಟೆ ಕಣ್ರಯ್ಯಾ ನೀವು" ಅಂತ ಹೇಳಿದ. ರಮೇಶ ಸಾಮಾನ್ಯ ಜ್ಞಾನ ಪುಸ್ತಕದಲ್ಲಿ ಅವನ ಬಗ್ಗೆ ಓದಿದ್ದ. ಅವನ ಚಿತ್ರವೂ ನೆನಪಿತ್ತು. ರಮೇಶನೇ ತಮ್ಮಂದಿರಿಗೆ ಬಹುಗುಣನ ಪರಿಸರ ಪ್ರೇಮ ವಿವರಿಸಿದ.

ರಂಗಪ್ಪ , "ಕಾಗದದ ವಿಷಯದಲ್ಲಿ ಮತ್ತೇನೇನು ಸಂಗ್ರಹಿಸಿದ್ದೀಯ" ಎಂದು ರಮೇಶನಿಗೆ ಕೇಳಿದ. ಅದಕ್ಕೆ ರಮೇಶ " ಕಾಗದದ ಬಗ್ಗೆ ಪುಸ್ತಕ ಒಂದನ್ನು ಸಂಗ್ರಹಿಸಿದ್ದನ್ನು ಹೇಳಿದ. ನಾನಿನ್ನೂ ಓದಿಲ್ಲ. ನೀವು ನನಗೆ ಒಂದಿಷ್ಟು ಮಾಹಿತಿ ನೀಡಿರಿ" ಎಂದು ಕೇಳಿದ. ಕೋಮಲ ಅಲ್ಲಿಗೆ ಬಂದು "ಸಾಕು ಇವತ್ತು ಮಲಗಿರಿ. ನಾಳೆ ಹೇಗೂ ಕಾರ್ಖಾನೆಗೇ ಹೋಗುತ್ತೀರಲ್ಲ" ಎಂದು ಎಚ್ಚರಿಸಿದಳು. ಮಲಗಲು ದಪ್ಪನೆಯ ಉಲ್ಲನ್‌ನಿಂದ ತಯಾರಾದ ಎಂಟು ಅಡಿ ಉದ್ದದ ಚಾಪೆ ಹಾಸಿದಳು. ಕಳೆದ ಬಾರಿ ಬಂದಾಗ ಅದು ಇರಲಿಲ್ಲ. ರಮೇಶನಿಗೆ ಕುತೂಹಲವಾಯಿತು. ಉಣ್ಣೆಯ ಚಾಪೆ ಬಗ್ಗೆ ಕೇಳಿದ. ಕನ್ನಡಕವನ್ನೂ ಕಣ್ಣಿನಿಂದ ತೆಗೆದು ಆಕಳಿಸಿ ಮೈ ಮುರಿಯುತ್ತ ರಂಗಪ್ಪ ಅದರ ಬಗ್ಗೆ ಹೇಳಿದ. "ಕಾಗದ ತಯಾರಿಸುವಾಗ ನೀರು ಹೀರಲು ಇಂಥಾದ್ದನ್ನು ಬಳಸುತ್ತಾರೆ. ನೀವು ಅಕ್ಕಿ ಹಪ್ಪಳವನ್ನು ಹಬೆಗೆ ಬೇಯಿಸೋದು ನೋಡಿಲ್ಲವೆ? ಹಾಗೆ ಅಷ್ಟು ತೆಳ್ಳಗೆ ನೀರು ಮಿಶ್ರಿತ ಕಾಗದ ಉಣ್ಣೆ ಚಾಪೆಯ ಮೇಲೆ ಹಾದು ಬರುತ್ತೆ. ಹಾಗೆ ಬರುವಾಗ ಈ ಉಣ್ಣೆ ಚಾಪೆ ನೀರು ಹೀರುತ್ತದೆ. ಇದರಿಂದ ಕಾಗದಕ್ಕೆ ಚಲಿಸುವ ಶಕ್ತಿ ಹೆಚ್ಚುತ್ತದೆ. ನಾಳೆ ಹೇಗೂ ತೋರಿಸುತ್ತೇನೆ ಮಲಗಿರಿ" ಎಂದು ಹೇಳಿ ತಾನೂ ಮಲಗಲು ಹೋದ.

ಬೆಳಿಗ್ಗೆ ಎಲ್ಲರೂ ಎದ್ದು ಬೆಳಗಿನ ಕೆಲಸ ಮುಗಿಸಿಕೊಂಡರು. ರಂಗಪ್ಪ ವೃತ್ತಪತ್ರಿಕೆ ಓದುತ್ತಿದ್ದ. ಅಷ್ಟರಲ್ಲಿ ಗಣೇಶ ಮೂಗು ಮುಚ್ಚಿಕೊಂಡು ಮುಖ ಕಿವುಚಿದ. ಸುರೇಶನ ಬೆನ್ನಿನ ಮೇಲೆ ಧಕ್ ಎಂದು ಗುದ್ದಿದ. ಸುರೇಶನೂ ಏನೋ ವಾಸನೆ ಗಮನಿಸಿ

ಮೂಗಿನ ಹೊಳ್ಳೆಗಳನ್ನು ಮುಚ್ಚಿಕೊಂಡ. ಗಣೇಶ ''ಥೂ ಹೂಸು ಬುರುಕ. ಬೆಳಗ್ಗೆ ಕಕ್ಕಸು ಮಾಡಿಲ್ಲವೇನೋ'' ಎಂದು ಸುರೇಶನಿಗೆ ಬೈದ. ಸುರೇಶ ಗಣೇಶನಿಗೆ ''ನೀನು ಹೂಸು ಬಿಟ್ಕೋನು ನಾವಲ್ಲ'' ಎಂದ.

ರಂಗಪ್ಪ ಪೇಪರ್ ಓದುವುದು ನಿಲ್ಲಿಸಿ ಜಗಳ ನೋಡಿ ಸನ್ನಿವೇಶ ಅರ್ಥ ಮಾಡಿಕೊಂಡ. ''ನೀವಿಬ್ರೂ ಹೂಸು ಬಿಟ್ಟಿಲ್ಲೋ ಮಾರಾಯರ. ನಮ್ಮ ಕಾಗದ ಕಾರ್ಖಾನೆ ಬಿಟ್ಟಿದೆ''. ಎಂದ ರಮೇಶನಿಗೆ ಅರ್ಥವಾಗಲಿಲ್ಲ. ''ಹೂಂ. ಥೂ ಥೂ ಇದೇನಪ್ಪ ಗಬ್ಬು ವಾಸನೆ'' ಎಂದು ಅವನೂ ದನಿಗೂಡಿಸಿದ. ರಂಗಪ್ಪ ಪೇಪರ್ ಬದಿಗಿಟ್ಟು ಹೇಳಿದ. ''ಇಲ್ಲಿ ಕೇಳಿ. ನಾವು ಕಾಗದ ತಯಾರಿಸುವಾಗ ಮದ್ಯಸಾರ ಮತ್ತು ಬೇರೆ ರಾಸಾಯನಿಕ ಬಳಸಿರುತ್ತೇವೆ. ಕಾಗದದ ತಿರುಳು (ಪಲ್ಪ್) ಪಡೆಯಲು ಹೀಗೆ ಮಾಡಿರುತ್ತೇವೆ. ಇವು ನೀರಿನಲ್ಲಿ ಬೆರತು ರಾಸಾಯನಿಕ ಪರಿವರ್ತನೆ ನಡೆಯುತ್ತದೆ. ಅದರಿಂದ ಒಂದು ಬಗೆಯ ದುರ್ಗಂಧ ಹುಟ್ಟುತ್ತದೆ. ಗಾಳಿ ಈ ಕೆಟ್ಟ ವಾಸನೆ ಹೊತ್ತು ತರುತ್ತದೆ. ಕಾರ್ಖಾನೆ ಸುತ್ತ ಮುತ್ತ ಐದಾರು ಮೈಲು ದೂರದ ವರೆಗೆ ಈ ವಾಸನೆ ಇರುತ್ತದೆ. ಇದರ ಕಟುವಾದ ವಾಸನೆ ತಡೆಯೋಕೆ ನಿಮಗೆ ಆಗೋಲ್ಲ. ನಮ್ಮ ಮೂಗು ಈ ವಾಸನೆಗೆ ಹೊಂದಿ ಕೊಂಡಿದೆ. ಪುಸ್ತಕದ ಭಾಷೆಯಲ್ಲಿ ನೀವು ಹೇಳ್ತೀರಲ್ಲ - ವಾಯು ಮಾಲಿನ್ಯ ಅಂತ. ಅದೇ ಇದು''. ಹುಡುಗರು ಹೋ ಎಂದು ಬಿದ್ದು ಬಿದ್ದು ನಕ್ಕರು. ನಾಲ್ಕೂ ಜನ ಕಾಗದ ಕಾರ್ಖಾನೆ ನೋಡಲು ಹೊರಟರು. ಪೇಪರ್ ಎನ್ನುವ ಪದ ಹೇಗೆ ಬಂತು ಎಂದು ಕುತೂಹಲದಿಂದ ರಮೇಶ ಕೇಳಿದ.

''ನೋಡು, ಪ್ಯಾಪಿರಾಸ್ ಅನ್ನುವ ಒಂದು ಜಲ ಸಸ್ಯ ಈಜಿಪ್ಟ್ ದೇಶದಲ್ಲಿ ಬೆಳೆಯುತ್ತಿತ್ತು. ನೈಲ್ ನದಿ ಕವಲಾಗಿ ಸಮುದ್ರ ಸೇರುತ್ತಿತ್ತು. ಆಗ ಸೀಳುಗಳಲ್ಲಿ, ನದಿಯಲ್ಲಿ, ಈ ಸಸ್ಯ ಬೆಳೆದು ದೊಡ್ಡ ದೊಡ್ಡ ಎಲೆ ಬಿಡುತ್ತಿತ್ತು. ಈ ಎಲೆಗಳದ್ದೂ ಒಂದು ಸ್ವಾರಸ್ಯವಿದೆ. ಎರಡು ಮೂರು ಸಾವಿರ ವರ್ಷದ ಹಿಂದೆ ಕಾಗದ ಇನ್ನೂ ತಯಾರಾಗಿರಲಿಲ್ಲ. ಆಗ ಈ ಎಲೆಯನ್ನು ಕಾಗದದ ಹಾಗೆ ಬಳಸುತ್ತಿದ್ದರು. ''ಪ್ಯಾಪಿರಾಸ್''ನಿಂದಲೇ ಪೇಪರ್ ಪದ ಬಂತು. ಇಷ್ಟೇ ಅಲ್ಲ. ನಾವು ಕಾಗದ ಅಂತ

ಅಂತೀವಲ್ಲ, ಅದೂ ಕನ್ನಡ ಪದವಲ್ಲ. ಅರಬರ ಭಾಷೆಯಲ್ಲಿ ಕಾಗಜ್ ಅಂತ ಹೆಸರು. ಕನ್ನಡದಲ್ಲಿ ಕಾಗಜ ಆಗಿ ಕೊನೆಗೆ ಕಾಗದ ಆಗಿದೆ''

ಮಾತನಾಡುತ್ತಾ ಬರುತ್ತಿದ್ದಂತೆ ''ಮೈಸೂರು ಕಾಗದ ಕಾರ್ಖಾನೆ'' ಎಂಬ ನಾಮ ಫಲಕ ಎದುರಾಯಿತು. ರಂಗಪ್ಪ ಮೊದಲೇ ಒಳಗೆ ಹೋಗುವ ಅಪ್ಪಣೆ ಚೀಟಿ ಪಡೆದಿದ್ದ. ಮೂರು ಉಕ್ಕಿನ ಬಾಗಿಲು ದಾಟಿ ಒಳಗೆ ಹೋದರು. ನೀಟಾಗಿ ಕತ್ತರಿಸಿ ಜೋಡಿಸಿದ್ದ ಮರದ ತುಂಡುಗಳ ಲಾಟು ಎದುರಾಯಿತು. ಸಿಪ್ಪೆ ಸುಲಿದಿದ್ದರಿಂದ ಬಾಳೆ ದಿಂಡಿನಂತೆ ಸೌದೆ ತುಂಡುಗಳು ಕಂಡವು.

''ಭಾವ, ಒಂದು ದಿನಕ್ಕೆ ಎಷ್ಟು ಸೌದೆ ಬೇಕು'' ರಮೇಶ ರಂಗಪ್ಪನಿಗೆ ಕೇಳಿದ. ರಂಗಪ್ಪ ''ಇಷ್ಟೇ ಅಂತ ಲೆಕ್ಕ ಇಲ್ಲ. ಇಪ್ಪತ್ತು ಮೂವತ್ತು ಲಾರಿ ಮರದತುಂಡನ್ನು ಪುಡಿ ಮಾಡುತ್ತೆ'' ಎಂದ. ನಂತರ ಮರ ಚೂರು ಮಾಡುವ ವಿಭಾಗದ ಗಂಗಯ್ಯ ಚಿಪ್ಪರ್ ಯಂತ್ರದ ಬಳಿಗೆ ಅವರನ್ನು ಕರೆದುಕೊಂಡು ಹೋದ. ಚೆನ್ನಾಗಿ ಸಿಪ್ಪೆ ತೆಗೆದ ಮರಗಳು ಚಲಿಸುವ ಪಟ್ಟಿಯಲ್ಲಿ ಬರುತ್ತಿದ್ದವು. ಅವುಗಳಿಗೆ ನೀರು ಹಾಯಿಸಿ ತೊಳೆಯುತ್ತಿದ್ದರು. ಮಣ್ಣು ಧೂಳಿಲ್ಲದ ಮರದ ತುಂಡುಗಳು ಯಂತ್ರದೊಳಕ್ಕೆ ಬೀಳುತ್ತಿದ್ದವು.

''ಒಳಗೆ ಹರಿತವಾದ ಸಜ್ಜಾದ ಬ್ಲೇಡುಗಳು ಕಾದಿರುತ್ತವೆ. ತುಂಡು ಬೀಳುತ್ತಲೇ ಚೂರು ಚೂರಾಗುತ್ತವೆ. ಆಲೆ ಮನೆಯಲ್ಲಿ ಕಬ್ಬು ಚೂರಾಗುವುದಿಲ್ಲವೆ! ಹಾಗೆ. ಸಣ್ಣ ಚೂರುಗಳು ಮುಂದೆ ಸಾಗುತ್ತವೆ. ಅಲ್ಲಿ ಜರಡಿ ಆಡಿಸಲಾಗುತ್ತದೆ. ದಪ್ಪ ಚೂರುಗಳು ಬೇರ್ಪಡುತ್ತವೆ. ಅವು ಪುನಃ ಚೂರಾಗುತ್ತವೆ. ಹೀಗೆ ಕತ್ತರಿಸಲಾದ ಚೂರುಗಳ ಯಾತ್ರೆ ತಾನೇ ಚಲಿಸುವ ಪಟ್ಟಿಯಲ್ಲಿ ಸಾಗುತ್ತವೆ. ಸಾಗಿ ಬೃಹತ್ ಸಿಮೆಂಟ್ ತೊಟ್ಟಿಗೆ ಬೀಳುತ್ತವೆ. ಇದು ದೊಡ್ಡ ಉಗ್ರಾಣ. ಇಲ್ಲಿ ಸಂಗ್ರಹವಾದ ಎಲ್ಲಾ ಮರದ ಚೂರುಗಳು ಒಂದೇ ಅಳತೆಯಲ್ಲಿರುತ್ತವೆ'' ಎಂದು ಗಂಗಯ್ಯ ಮಕ್ಕಳಿಗೆ ತಿಳಿಸಿದ.

ರಂಗಪ್ಪ ಹುಡುಗರನ್ನು ಡೈಜೆಸ್ಟರ್ ಎಂಬ ಮುಂದಿನ ಹಂತಕ್ಕೆ ಕರೆದು ಕೊಂಡು ಹೋದ. ಅಲ್ಲಿ ಕೆಲಸದಲ್ಲಿ ನಿರತನಾಗಿದ್ದ ಸಿದ್ದೇಗೌಡ ಪರಿಚಯದ ನಗೆ

ಬೀರಿದ. ರಂಗಪ್ಪ ಅವನನ್ನು ಮಾತನಾಡಿಸಿ ಡೈಜೆಸ್ಟರ್ ಕೆಲಸ ವಿವರಿಸಲು ಕೇಳಿಕೊಂಡ. ಸಿದ್ದೇಗೌಡ ನಗುತ್ತ ರಮೇಶನಿಗೆ "ನಿನ್ನೆ ರಾತ್ರಿ ಏನು ಊಟ ಮಾಡಿದ್ದೆ" ಎಂದ. ರಮೇಶ "ಚಪಾತಿ ಪಲ್ಯ ಅನ್ನ ಸಾರು" ಎಂದು ಹೇಳಿದ. ಸಿದ್ದೇಗೌಡ "ಬೆಳಿಗ್ಗೆ ಹಸಿವಾಗಿತ್ತೆ" ಎಂದ. ಗಣೇಶ "ಹೌದು, ಹೌದು" ಎಂದು ತಲೆ ಆಡಿಸಿದ. ಹಾಂ! ಇಲ್ಲಿ ನೋಡಿ. ನಾಲ್ಕು ದೊಡ್ಡ ಕಡಾಯಿಗಳಿವೆ. ಇವೇ ನಿಮ್ಮ ಹೊಟ್ಟೆಯಂತೆ. ಹಿಂದೆ ಉಗ್ರಾಣ ನೋಡಿದಿರಲ್ಲ. ಅಲ್ಲಿಂದ ಇಲ್ಲಿಗೆ ಮರದ ಚೂರುಗಳು ಬರುತ್ತವೆ. ಅವನ್ನು ನಾವು ಇಲ್ಲಿ ಜೀರ್ಣಗೊಳಿಸುತ್ತೇವೆ. ಮರ ಇಲ್ಲಿ ಪಚನವಾಗುತ್ತೆ. ಅಂದರೆ ಜೀರ್ಣವಾಗುತ್ತೆ. ಇವನ್ನು ಪಾಚಕ ಪಾತ್ರೆ ಅಂತಲೂ ಕರೆಯಬಹುದು" ಹೀಗೆ ಹೇಳುತ್ತಾ ಹೋದ. ರಮೇಶ ಕುತೂಹಲದಿಂದ ಪೆನ್ನು ತೆಗೆದು ಹಾಳೆಯಲ್ಲಿ ಗುರುತು ಹಾಕಿಕೊಳ್ಳುತ್ತಾ ಬಂದ.

ಕಾಗದ ಆಗಲು ಬೇಕಾದ ಗುಣ ಮರದಲ್ಲಿರುತ್ತದೆ. ನಾರಿನ ಬಗೆಯ ಮರಗಳು ಮುಖ್ಯವಾಗಿ ಬೇಕು. ಈ ನಾರಿನ ಎಳೆಗಳಿಗೆ ಶಕ್ತಿ ಇರುತ್ತದೆ. ಅಕೇಶಿಯಾ, ನೀಲಗಿರಿ, ಬೊಂಬು, ಗಟ್ಟಿಜಾತಿ ಮರ ಇವನ್ನೆಲ್ಲಾ ಬಳಸುತ್ತೇವೆ. ಕಾಗದದ ಗುಣ ಯಾವುದು ಗೊತ್ತೆ? ಅದನ್ನು ಸೆಲ್ಯುಲೋಸ್ ಎನ್ನುತ್ತಾರೆ. ಇದು ಜೈವಿಕ ರಾಸಾಯನಿಕ ವಸ್ತು. ಇದು ಸಸ್ಯದಲ್ಲಿ ನಾರಿನ ಭಾಗದಲ್ಲಿ ಇರುತ್ತದೆ. ಇದರ ಬಣ್ಣ ಬಿಳಿ. ಸೆಲ್ಯುಲೋಸ್‌ಗೆ ರೇಷ್ಮೆಯಂತಹ ಹೊಳಪು ನೀಡುವ ಗುಣ ಇದೆ. ನಾರಿನಲ್ಲಿ ಸೆಲ್ಯುಲೋಸ್ ಅಣುಗಳು ಅಂಟಿಕೊಂಡಿರುತ್ತವೆ. ಇವು ಇರುವುದರಿಂದಲೇ ಮರ ನಾರಿನಂತೆ ಜಿಗುಟಾಗಿರುತ್ತದೆ ಎಂದು ಸಿದ್ದೇಗೌಡ ಹೇಳಿದ.

ಹೀಗಿರಲು ಒಂದು ಕಾರಣವೂ ಇದೆ. ಲಿಗ್ನಿನ್ ಎಂಬ ಜೈವಿಕ ವಸ್ತು ಇರುತ್ತದೆ. ಈ ಲಿಗ್ನಿನ್‌ಗೆ ಅಂಟುಗುಣವಿರುತ್ತದೆ. ಕಾಗದ ತಯಾರಾಗಲು ನಮಗೆ ಬೇಕಾಗಿರುವುದು ಸೆಲ್ಯುಲೋಸ್ ಅಂಶ ಮಾತ್ರ. ಲಿಗ್ನಿನ್ ಅಲ್ಲ. ಆದರೆ ಈ ಲಿಗ್ನಿನ್ ಸುಲಭವಾಗಿ ತೊಲಗುವುದಿಲ್ಲ. ಅದನ್ನು ತೊಲಗಿಸಲೇಬೇಕು. ಇಲ್ಲದಿದ್ದರೆ ಒಳ್ಳೆಯ ಕಾಗದ ಸಿಗುವುದಿಲ್ಲ. ಇದಕ್ಕಾಗಿ ಅನೇಕ ಕ್ರಮಗಳಿವೆ. ಮರದ ಚೂರುಗಳನ್ನು ಭೌತಕ್ರಿಯೆಗೆ ಅಳವಡಿಸಬೇಕು. ಇಲ್ಲವೆ ರಾಸಾಯನಿಕ ಕ್ರಿಯೆಗೆ ಗುರಿಮಾಡಬೇಕು".

ಹೀಗೆ ಮಾಡಲು, 'ಕಾಯಿಸು, ಬೇಯಿಸು, ರಸಾಯನ ಸೇರಿಸು' - ಎಂಬ ಕೆಲಸ ಪ್ರಾರಂಭವಾಗುತ್ತದೆ. ಲಿಗ್ನಿನ್ ಅನ್ನು ಕರಗಿಸಬೇಕು. ಸೆಲ್ಯುಲೋಸನ್ನು ಉಳಿಸಿಕೊಳ್ಳಬೇಕು. ಇದು ಹೇಗೆ? ಸಿದ್ದೇಗೌಡ ಹೇಳುತ್ತಿದ್ದಾಗ ರಮೇಶ ತನಗೆ ಏನೋ ಹೊಳೆದಂತಾಗಿ "ಜನಪದ ಕಲೆಯಲ್ಲಿ ರಾಕ್ಷಸನನ್ನು ಕೊಂದು ರಾಜಕುಮಾರನನ್ನು ಉಳಿಸಿದ ಹಾಗೆ" ಎಂದ. "ಹೌದು ಹಾಗೆ ಉಳಿಯುವುದನ್ನೇ ನಾವು ತಿರುಳು ಎನ್ನುತ್ತೇವೆ." ಎಂದು ಸಿದ್ದೇಗೌಡ ಮುಂದುವರೆಸಿದ. ಅಲ್ಲಿ ಯಂತ್ರಗಳು ಕಿವಿ ತೂತು ಬೀಳುವಂತೆ ಶಬ್ದ ಮಾಡುತ್ತಿದ್ದವು. ಸಿದ್ದೇಗೌಡ ಗಟ್ಟಿಯಾಗಿ ಹೇಳತೊಡಗಿದ.

"ಅಗೋ ನೋಡಿ, ನಾಲ್ಕು ದೊಡ್ಡ ಕಡಾಯಿಗಳು ಕಾಣಿಸುತ್ತಿವೆಯಲ್ಲಾ, ಅದರಲ್ಲಿ ಪಚನ ಪ್ರಾರಂಭವಾಗುತ್ತದೆ. ಪಚನದಲ್ಲಿ ರಾಸಾಯನಿಕ ವಸ್ತು ಸೇರಿಸುತ್ತಾರೆ. ಇಲ್ಲಿ ತಿರುಳು ಪಡೆಯುವ ಹಂತದ ಆರಂಭ ಕಾಣುತ್ತೇವೆ. ತಿರುಳಿನಲ್ಲೂ ಹಲವು ಬಗೆಗಳಿವೆ. ಮುಖ್ಯವಾಗಿ ಎರಡು ಬಗೆಯ ತಿರುಳು ತೆಗೆಯುತ್ತಾರೆ. ಒಂದು ಯಾಂತ್ರಿಕ ತಿರುಳು. ಇದನ್ನು ಮೆಕ್ಯಾನಿಕಲ್ ಪಲ್ಪ್ ಎನ್ನುತ್ತಾರೆ. ಇದು ಒಳ್ಳೆಯ ಕಾಗದಕ್ಕೆ ಮಾತ್ರ, ಬರವಣಿಗೆ ಕಾಗದಕ್ಕೆ ಬರುವುದಿಲ್ಲ. ಅಂದರೆ ಮುದ್ರಣ ಕಾಗದ ದರ್ಜೆಗೆ ಇದನ್ನು ಸಿದ್ಧಪಡಿಸುತ್ತಾರೆ. ಎರಡನೆಯದು ರಾಸಾಯನಿಕ ತಿರುಳು. ಇದನ್ನು ಕೆಮಿಕಲ್ ಪಲ್ಪ ಎನ್ನುತ್ತಾರೆ. ಉತ್ತಮ ಕಾಗದ ಪಡೆಯಲು ಈ ತಿರುಳು ಬೇಕು. ಇದನ್ನೂ ಪಡೆಯಲು ಶುದ್ಧ ಕಾಗದದ ಸೆಲ್ಯುಲೋಸ್ ಇರುತ್ತದೆ."

"ಪಾಚಕ ಪಾತ್ರೆಗೆ ಹಬೆ ಹಾಯಿಸಲಾಗುತ್ತದೆ. ಅಂದರೆ ಮರದ ಚೂರು ಇಲ್ಲಿ ತರಕಾರಿಗಳಂತೆ ಬೇಯುತ್ತದೆ. ಬೆಂದು ಅರಳುತ್ತದೆ. ಹಿಂದೆ ಹೇಳಿದ ಬೇಡವಾದ ವಸ್ತು ಲಿಗ್ನಿನ್ ನೆನಪಿದೆ ತಾನೆ? ಅದನ್ನೂ ಹೊರತೆಗೆಯಲು ರಾಸಾಯನಿಕ ಮಿಶ್ರಣವನ್ನು ಹದವಾಗಿ ಸೇರಿಸಲಾಗುವುದು. ಹೀಗೆ ಮಾಡಲು ಆಲ್ಕೋ ಹಾಲ್ ಬಳಸುತ್ತಾರೆ. ಪಾಚಕ ಪಾತ್ರೆಯಿಂದ ಪಾತ್ರೆಗೆ ಮರದ ಚೂರು ಮೆತ್ತಗಾಗುತ್ತ ಸಾಗುತ್ತದೆ. ಆದರೂ ಅಲ್ಲಲ್ಲಿ ಗಂಟುಗಳು ಉಳಿದಿರುತ್ತವೆ. ಕುದಿಯುವ ಮುದ್ದೆಯಲ್ಲಿ ಹಿಟ್ಟಿನ ಗಂಟುಗಳಿರುವಂತೆ. ಅಂತಹ ಗಂಟುಗಳನ್ನು ಜರಡಿಯಲ್ಲಿ ತೆಗೆದು ಸುರಿಸಿ ಅವನ್ನು ಸೇರಿಸಲಾಗುವುದು.

ಈ ಹಂತದಲ್ಲಿ ನೀರಿನ ಹಬೆಯನ್ನು ಒತ್ತಡದ ಮೂಲಕ ಸೇರಿಸುತ್ತಾರೆ. ಅಂಬಲಿಯಂತೆ ಬೇಯುತ್ತ ಪಚನ ಪ್ರಾರಂಭವಾಗುತ್ತದೆ. ಆಶ್ಚರ್ಯ ಅಂದರೆ ಕಪ್ಪನೆಯ ಮಡ್ಡಿಯಂತೆ ಆಕಾರ ತಾಳಿರುತ್ತದೆ. ಈ ಬಣ್ಣಕ್ಕೆ ಕಾರಣ, ಸೇರಿಸುವ ರಾಸಾಯನಿಕ ವಸ್ತುಗಳೇ ಆಗಿರುತ್ತವೆ. ಇಲ್ಲಿ ಲಿಗ್ನಿನ್ ಬಿಡಿಸುವ ಕ್ರಿಯೆ ನಡೆಯುತ್ತದೆ. ಸುಣ್ಣ ಸೇರಿಸುತ್ತಾರೆ. ಪಾಚಕ ಪಾತ್ರೆಯ ನಾಲ್ಕು ಹಂತಗಳು ದಾಟುವ ಹೊತ್ತಿಗೆ ತಿರುಳು ಕಾಯಿತುರಿಯಂತಾಗಿರುತ್ತದೆ. ನಾರುಗುಣ ಉಳಿದಿರಬೇಕು. ಪಾಕದಲ್ಲಿ ನಾರು ಕಾಣಿಸಬಾರದು. ರಾಸಾಯನಿಕಗಳನ್ನು ಬಳಸಿರುವುದರಿಂದ ಲಿಗ್ನಿನ್ ಈ ಹಂತದಲ್ಲಿ ಉರಿದು ಹೋಗಿರುತ್ತದೆ. ಡಾಂಬರಿನಂತೆ ಕಪ್ಪಗಿದ್ದ ತಿರುಳು ಈಗ ತೆಳು ಕಂದು ಬಣ್ಣಕ್ಕೆ ತಿರುಗುತ್ತದೆ.

ಸಿದ್ದೇಗೌಡರಿಗೆ ಹಾಗೇ ಮುಂದುವರೆಸಲು ಹೇಳಿದ ರಂಗಪ್ಪ, ಹುಡುಗರನ್ನೂ ಮುಂದಿನ ಹಂತಕ್ಕೆ ಕರೆದುಕೊಂಡು ಹೋದ. ಅಲ್ಲಿ ಒಂದೇ ಸಮಗಾತ್ರದ ಭಾರೀ ಎತ್ತರದ ವಾಷರ್‌ಗಳಿದ್ದವು. ನಾಲ್ಕು ಹಂತಗಳ ಎರಡು ಜೋಡಿ ಯಂತ್ರಗಳು. ಭಾರೀ ದೊಡ್ಡ ಡ್ರಮ್ಮುಗಳನ್ನು ಅಡ್ಡಡ್ಡ ಮಲಗಿಸಿದಂತೆ ಕಂಡವು. ಅಟ್ಟ ಹತ್ತಿ ಅಲ್ಲಿಗೆ ಹೋದರು. ತಿರುಳನ್ನು ಪುನಃ ಪುನಃ ತೊಳೆಯುವ ಕೆಲಸ ಅಲ್ಲಿ ನಡೆದಿತ್ತು. ಇದರಿಂದ ಎರಡು ಪ್ರಯೋಜನಗಳಿವೆ. ಒಂದು-ತಿರುಳು ಚೊಕ್ಕವಾಗುವುದು. ಮತ್ತೊಂದು ಬಳಸಿದ ರಾಸಾಯನಿಕ ವಸ್ತುಗಳನ್ನು ಪುನಃ ಸಂಗ್ರಹಿಸುವುದು. ಅಡ್ಡ ಸಾಗಿಬರುವ ತಿರುಳು ಒಂದು ಬದಿಯಿಂದ ಮೇಲೇರುತ್ತದೆ. ಬಲ ಬದಿಗೆ ಜಾರಿ ಅಲ್ಲಿಂದ ಮುಂದಿನ ವಾಷರ್‌ಗೆ ಸಾಗುತ್ತದೆ. ಇವುಗಳ ತಲೆಯ ಮೇಲೆ ರಾಸಾಯನಿಕ ಸಿಂಪಡಣೆ ನಡೆಯುತ್ತಲೇ ಇರುತ್ತದೆ. ಕಟುವಾದ ರಾಸಾಯನಿಕ ಬಳಸುತ್ತ ಮಂದ, ದುರ್ಬಲಗೊಳಿಸುವಿಕೆ ನಡೆಯುತ್ತದೆ. ಕಂದು ಬಣ್ಣದ ತಿರುಳು ಒಂದರಿಂದ ಮತ್ತೊಂದಕ್ಕೆ ಸಾಗುವುದು. ವಾಷರ್‌ಗಳು ಸುತ್ತುತ್ತಲೇ ಇರುತ್ತವೆ.

ಕೊನೆಯ ಯಂತ್ರದಲ್ಲಿ ತಿರುಳು ಸಂಪೂರ್ಣ ಕೆನೆ ಬಣ್ಣಕ್ಕೆ ತಿರುಗಿರುತ್ತದೆ. ಗಣೇಶ ಬಗ್ಗಿ ಅದನ್ನು ಕೈಯಲ್ಲಿ ಮುಟ್ಟಿ "ಅಬ್ಬಾ ಎಷ್ಟು ಚೆನ್ನಾಗಿದೆ. ಕೊಬ್ಬರಿ

ತುರಿಯನ್ನು ಪುನಃ ರುಬ್ಬಿದಂತಿದೆ. ಇದೇ ಮಿಠಾಯಿ ಆದರೆ ಎಷ್ಟು ಬೇಕಾದರೂ ತಿನ್ನಬಹುದು'' ಎಂದು ಬಾಯಲ್ಲಿ ಹಾಕಿಕೊಂಡಂತೆ ನಟಿಸಿದ. ರಂಗಪ್ಪ ತಿಂದೇ ಬಿಟ್ಟಾನೆಂದು ಕೈ ಅಡ್ಡ ಹಿಡಿದ. ಗಣೇಶ ಕಿಲಾಡಿ ನಗೆ ನಕ್ಕು ''ಏನ್ರಿ ಭಾವ ನನ್ನನ್ನೇನು ಹಳ್ಳಿಗುಗ್ಗೂಂತ ತಿಳಿದಿರಾ'' ಎಂದು ತಿರುಳನ್ನು ವಾಷರ್‌ಗೆ ಎಸೆದ.

ಇಲ್ಲಿ ಕೆನೆ ಬಿಳುಪು, ಹಾಲು ಬಿಳುಪು ಬರಲು ಕಾರಣ ಗೊತ್ತೆ? ಕ್ಲೋರಿನ್ ಸೇರಿಸುವುದರಿಂದ ಹಾಗಾಗುತ್ತದೆ. ಕ್ಲೋರಿನ್ ವಾಷರ್ ಬಳಿ ತಲೆ ಸುತ್ತು ಬರುವಂತಹ ಕಟುವಾಸನೆ ಇತ್ತು. ಎಲ್ಲರನ್ನೂ ಹಿಂದೆ ಸರಿಸಿ ನಿಲ್ಲಿಸಿದ ರಂಗಪ್ಪ. ಬರಬರುತ್ತಾ ಕ್ಲೋರಿನ್ ಹಾಯಿಸುವಿಕೆ ದುರ್ಬಲಗೊಳಿಸುವರು. ಕೊನೆಯ ಹಂತದ ಯಂತ್ರದಲ್ಲಿ ಯಾವ ರಾಸಾಯಿನಿಕವೂ ಇಲ್ಲದ ಶುದ್ಧ ತಿರುಳು ಕಾಣಿಸುತ್ತದೆ. ಪಾಚಕ ಯಂತ್ರದಲ್ಲಿ ಅದು ಕಪ್ಪಾಗಿತ್ತು. ಈಗ ಬ್ಲೀಚಿಂಗ್ ಆಗಿದ್ದರಿಂದ ಬೆಳ್ಳಗಾಗಿದೆ. ಸಿದ್ದೇಗೌಡ ಕೊಂಚ ತಿರುಳು ತೆಗೆದು ನೀರಲ್ಲಿ ತೊಳೆದು ರಮೇಶನಿಗೆ ತೋರಿಸಿದ. ಅದು ಅತ್ಯಂತ ನಯವಾಗಿ, ಮೃದುವಾಗಿತ್ತು. ಮಲ್ಲಿಗೆಗಿಂತಲೂ ಹೆಚ್ಚಿನ ಹೊಳಪು ಬಂದಿತ್ತು.

ಪಕ್ಕದಲ್ಲಿ ಹೊರಗಡೆ ಚೌಕಾಕಾರದಲ್ಲಿ ಪೇರಿಸಿದ್ದ ಬೃಹತ್ ಬಂಡೆಗಳು ಕಾಣಿಸಿದವು. ಹತ್ತಿ ಬೇಲುಗಳಂತೆ ಕಂಡ ಅವು ಆಮದು ಪಲ್ಪ್ ಆಗಿದ್ದವು. ''ಇಲ್ಲೇ ತಿರುಳು ಸಿದ್ಧವಾಗಿದೆ. ಈ ತಿರುಳು ಯಾಕೆ ಬೇಕು. ಇದು ಯಾಕೆ ಒಣಗಿದೆ?'' ಎಂದು ರಮೇಶನ ಪ್ರಶ್ನೆ ಪ್ರಾರಂಭವಾಯಿತು. ಅವುಗಳ ಸಮೀಪಕ್ಕೆ ರಂಗಪ್ಪ ಕರೆದೊಯ್ದು ಹೇಳಿದ. ''ನೋಡಿ. ನಾವು ತಿರುಳು ಮಾಡಿದ್ದೆಲ್ಲ ಸಾಕಾಗೋಲ್ಲ. ಕೆಲವು ಬಾರಿ ಕೊರತೆ ಬರುತ್ತೆ. ಆಗ ತತ್‌ಕ್ಷಣ ಇದನ್ನು ದೊಡ್ಡ ಕಡಾಯಿಗೆ ಹಾಕಿ ಕದಡಿ ಕೊಳ್ಳುತ್ತೇವೆ. ನಾವು ಇಲ್ಲಿಯವರೆಗೆ ನೋಡಿದೆವಲ್ಲ ಈ ತಿರುಳು ಅದೇ ಹಂತದ್ದು''

ಸುರೇಶ ಚಪ್ಪಾಳೆ ತಟ್ಟಿ ನಕ್ಕ. ಉಳಿದವರು ತಿರುಗಿ ನೋಡಿದರು. ಸುರೇಶ ''ನಿಮಗೇನು ಬುದ್ಧಿ ಇಲ್ಲವೆ? ಇಷ್ಟು ಸುಲಭವಾಗಿ ಸಿಗುತ್ತೆ ಅಂದರೆ ಇಲ್ಲಿವರೆಗೆ ನೀವು ಮಾಡಿದ್ದೆಲ್ಲ ದಂಡ. ಇನ್ನು ಮೇಲೆ ಹೀಗೆಲ್ಲ ಹಣ ಹಾಳುಮಾಡಬೇಡಿ. ಸುಮ್ಮನೆ ಈ ತರ ತರಿಸಿಬಿಡಿ. ಕೆಲಸವೂ ಕಮ್ಮಿ. ಹಣವೂ ಉಳಿತಾಯ''ಎಂದ. ರಂಗಪ್ಪ

ಅವನ ಕಿವಿ ಹಿಂಡಿ ಹೇಳಿದ. ''ಕೋಡಂಗಿ. ನೀನೊಬ್ಬನೇ ಜಾಣ. ಉಳಿದೋರೆಲ್ಲ ಕೋಣ ಅಂತ ತಿಳಿದಿದ್ದೀಯಾ? ಈ ಪಲ್ಪು ಉಂಡೆಗಳಿದ್ದಾವಲ್ಲ. ಇವು ಕೆನಡಾದಿಂದಲೋ, ಅಮೇರಿಕಾದಿಂದಲೋ ಬಂದಿವೆ. ವಿದೇಶೀ ವಿನಿಮಯದಿಂದ ಹಣ ಹಾಳಾಗಿದೆ. ಸುಂಕ ನೀಡಿದ್ದೇವೆ. ಈಗ ನೀವು ನೋಡಿದಿರಲ್ಲ, ನಾವು ತಯಾರಿಸಿದ್ದು. ಅದಕ್ಕೆ ಇದರ ಅರ್ಧದಷ್ಟು ಬೆಲೆ ಮಾತ್ರ ಖರ್ಚಾಗಿದೆ. ಇದನ್ನು ಹಿಂದೆ ನಾವು ತರಿಸುತ್ತಿದ್ದೆವು. ತರಿಸೋದು ಬಹಳ ದುಬಾರಿ. ಅದನ್ನು ಬಳಸೋಲ್ಲ. ನಮ್ಮ ತಿರುಳು ಕಡಿಮೆ ಆದಾಗ ಸ್ವಲ್ಪ ಬಳಸುತ್ತೇವೆ ಅಷ್ಟೆ''

ರಮೇಶ ಒಂದುಕಡೆ ನಿಂತುಕೊಂಡು ಹಾಳೆಯ ಮೇಲೆ ಗುರುತು ಹಾಕಿಕೊಂಡ. ರಿಫೈನಿಂಗ್ ಎಂಬ ವಿಭಾಗದಲ್ಲಿ ತಿರುಳನ್ನು ಪುನಃ ಶೋಧಿಸುವ ಬಗೆ ನೋಡಿಕೊಂಡ. ಇನ್ನು ಮುಂದಿನ ಹಂತವೇ ತಿರುಳನ್ನು ಕಾಗದವಾಗಿ ಪರಿವರ್ತಿಸುವುದು.

ಸಿದ್ಧವಾದ ತಿರುಳು ಅತ್ಯಂತ ಸೂಕ್ಷ್ಮ ತಂತಿ ಬಲೆಯಲ್ಲಿ ಹಾಯಬೇಕು. ಹಾದು ಬರುವಾಗ ಬಲೆಯ ಅಗಲಕ್ಕೂ ಹರಡಿಕೊಂಡು ಬರುತ್ತದೆ. ಮನೆಯ ಗೋಧಿಹಿಟ್ಟು ಸಾಣಿಸುವ ಜರಡಿ ಇರುತ್ತಲ್ಲ, ಅದಕ್ಕಿಂತ ಸೂಕ್ಷ್ಮ. ಇಲ್ಲಿಯವರೆಗೆ ಕಂಡಂತೆ ತಿರುಳಿಗೂ ನೀರಿಗೂ ಎಡಬಿಡದ ನಂಟು ಗೆಳತನ. ಈಗ ಆ ಗೆಳೆತನ ಬಿಡಿಸಬೇಕು ಇಲ್ಲದಿದ್ದರೆ ಕಾಗದ ದೊರೆಯುವುದು ಹೇಗೆ? ತಂತಿಯ ಬಲೆಯಲ್ಲಿ ತೆಳ್ಳಗೆ, ಅಗಲಕ್ಕೂ ಹರಡಿಕೊಂಡು ಬರುತ್ತದೆ. ಆಗ ನೀರು ತಂತಿಬಲೆಯ ಅಡಿಯಲ್ಲಿ ಇಳಿಯುತ್ತದೆ. ತಿರುಳು ಮೇಲೆ ಉಳಿಯುತ್ತದೆ.

ಹಪ್ಪಳಕ್ಕಿಂತಲೂ ತೆಳ್ಳಗೆ ಬೆಳ್ಳಗೆ ಕಾಗದ ಹರಡಿಬರುತ್ತಿತ್ತು. ನೋಡುತ್ತಾ ಬಂದ ರಮೇಶನಿಗೆ ಸೋಜಿಗವೆನಿಸಿತು. ಹಾಗೇ ನೋಡುತ್ತಾ ಬಂದರೂ ಹರಿದು ಬರುತ್ತಿದ್ದ ಧಾರೆಗೆ ಎದುರಾಗಿ ಒತ್ತು ಸುರುಳಿಗಳು ಎದುರಾದವು. ಕೆಳಗೆ ಮೇಲೆ ಹೀಗೆಲ್ಲ ಉದ್ದನೆಯ ಲಟ್ಟಣಿಗೆ ಆಕಾರದ ಅವುಗಳಲ್ಲಿ ಕಾಗದ ಈಗ ಹಾಯುತ್ತಿತ್ತು. ಸುರಳಿಗಳು ಒತ್ತುವ ಕೆಲಸ ಮಾಡುತ್ತಿದ್ದವು. ಒತ್ತುವಿಕೆಯಲ್ಲಿ ಪುನಃ ನೀರಿನಂಶ ಕಡಿಮೆಯಾಗುತ್ತದೆ. ಮಂದವಾಗಿದ್ದ ದ್ರವಕ್ಕೆ ಶಕ್ತಿ ಬರುತ್ತದೆ. ಕಾಗದದ ರೂಪ ಹೆಚ್ಚು

ಕಾಣಿಸುತ್ತದೆ. ತಿರುಳಿನ ಕೋಟ್ಯಂತರ ಕಣಗಳು ಹತ್ತಿರವಾಗುತ್ತದೆ. ಒತ್ತುವಿಕೆ ದಾಟಿ ಕಾಗದ ಚಾಪೆ ಮುಂದಿನ ಹಂತಕ್ಕೆ ಬರುತ್ತದೆ.

ರಮೇಶ ಕಾಗದ ಚಲಿಸುವುದರ ಅಡಿಯ ಪಟ್ಟಿ ಗಮನಿಸಿದ. ರಾತ್ರಿ ತಾವು ಮಲಗಿದ್ದ ದಪ್ಪ ಎಣ್ಣೆಯ ಚಾಪೆ. ಆ ಚಾಪೆಯ ಮೇಲೆ ಉದ್ದಕ್ಕೆ ಸಾಗುತ್ತಿತ್ತು. ರಮೇಶ ''ಇಲ್ಲಿ ಏನು ಬದಲಾವಣೆ'' ಎಂದು ಕೇಳಿದ. ರಂಗಪ್ಪ ''ನೋಡು ಉಣ್ಣೆ ಚಾಪೆ ಥರ ಕಾಣುತ್ತಲ್ಲ ಇದನ್ನು ಫೆಲ್ಟ ಅನ್ನುತ್ತಾರೆ. ಇದಕ್ಕೆ ನೀರು ಹೀರುವ ಗುಣ ಇದೆ. ಇದು ಹೀರಿದ ನೀರನ್ನು ಪುನಃ ಕೆಳಕ್ಕೆ ಎಳೆಯಲು ಗಾಳಿ ಬಳಸಿಕೊಳ್ಳುತ್ತಾರೆ. ಒತ್ತುವ ರೋಲರ್‌ಗಳಲ್ಲಿ ನೋಡಿದ ಕಾಗದಕ್ಕೂ ಇಲ್ಲಿಗೂ ವ್ಯತ್ಯಾಸವಿದೆ. ಅಲ್ಲಿಗಿಂತ ನೀರಿನಂಶ ಇಲ್ಲಿ ಇನ್ನೂ ಕಮ್ಮಿಯಾಗಿದೆ. ಬೆರಳಿಟ್ಟರೆ ಹರಿಯಬಹುದು. ಕಾಗದದ ರೂಪ ಬಂದಿದೆ. ಈಗಿನ ಮುಖ್ಯ ಕೆಲಸ ತೇವ ತೆಗೆಯುವುದು ತಾನೆ. ಉಣ್ಣೆಯ ಚಾಪೆಗೆ ಆ ಶಕ್ತಿ ಇದೆ. ನಿನಗೆ ಚೆನ್ನಾಗಿ ತಿಳಿಯೋದು ಇಲ್ಲಿ. ನೋಡು ಬಾ'' ಎಂದು ಎಲ್ಲರನ್ನೂ ಮುಂದಕ್ಕೆ ಕರೆದುಕೊಂಡು ಹೋದ.

ಕಾಗದದ ಧಾರೆ ಈಗ ಬಿಸಿಯಾಗಿ ಸಿಲಿಂಡರಗಳ ಮೇಲೆ ಹಾಯ್ದು ಬರಬೇಕು. ಸಿಲಿಂಡರ್‌ಗಳು ಬಿಸಿಯಾಗಲು ಉಗಿಯನ್ನು ಸುರುಳಿಗಳೊಳಗೆ ತುಂಬಿರುತ್ತಾರೆ. ಕಾಗದದಲ್ಲಿ ತೇವ ಕಡಿಮೆಯಾಗುತ್ತಾ ಬಂದಿತ್ತು. ಈಗ ಬಹುತೇಕ ಭಾಗ ಇಲ್ಲಿ ಬಿಸಿಗೆ ಆವಿಯಾಗುತ್ತದೆ. ಕಾಗದ ಒಣಗುತ್ತ ಹೋದಂತೆ ಹೊಳಪು ಕಾಣತೊಡಗಿತು. ಈಗ ಮುಟ್ಟಿದರೆ ತೂತಾಗದೆ ಹರಿಯುವ ಹದ ಕಾಗದಕ್ಕೆ ಸಿಕ್ಕಿತು.

ರಂಗಪ್ಪ ಅವರನ್ನು ಕ್ಯಾಲೆಂಡರ್ ಸುರುಳಿ ಬಳಿ ಕರೆತಂದ. ಕಾಗದಕ್ಕೆ ಈಗ ಪೂರ್ಣ ರೂಪ ಬಂದಿದೆ. ಆದರೆ ಗುಣ ಬಂದಿಲ್ಲ. ಕಾಗದದ ಮೈ ನಯವಾಗಿಲ್ಲ. ನಯವಿಲ್ಲದಿದ್ದರೆ ಅಕ್ಷರ ಚಂದಕಾಣವು. ಪೆನ್ನು ಸುಲಲಿತವಾಗಿ ಓಡುವುದಿಲ್ಲ. ಕ್ಯಾಲೆಂಡರ್ ಎಂಬುದು ಒಂದು ಭಾರವಾದ ವಿಶೇಷ ಉಕ್ಕಿನ ರೋಲರ್. ಅದು ಮುಟ್ಟಿದರೆ ಕೈ ಸುಟ್ಟು ಹೋಗುವಂತೆ ಕಾದಿರುತ್ತದೆ. ಅದರ ಬಿಸಿಯ ನಯವಾದ ಮೈ ಕಾಗದಕ್ಕೆ ತಾಗುತ್ತದೆ. ಕಾಗದ ನಯಗೊಳ್ಳುತ್ತದೆ.

ಅತ್ಯಂತ ಗಂಭೀರವಾಗಿ ರಮೇಶ ಕಾಗದ ತಯಾರಿಕೆ ನೋಡುತ್ತಾ ಬಂದಿದ್ದ. ಕ್ಯಾಲೆಂಡರ್ ಸುರುಳಿ ದಾಟಿ ಕಾಗದ ಹೊರಬಂತು. ರಮೇಶ ಸಂತೋಷದಿಂದ ಕೂಗಿದ "ಅಬ್ಬಾ! ಕೊನೆಗೂ ಬಂತು ಕಾಗದ! ಭಾವಾಜಿ ಇದನ್ನು ತಯಾರು ಮಾಡೋದು ಇಷ್ಟು ಕಷ್ಟದ ಕೆಲಸ ಅಂತ ತಿಳಿದಿರಲಿಲ್ಲ. ಅಬ್ಬ! ಏನು ಯಂತ್ರಗಳು. ಏನು ಕೆಲಸ. ಎಷ್ಟು ಕಷ್ಟ" ಎನ್ನುತ್ತ ದೊಡ್ಡ ರೀಲುಗಳಲ್ಲಿ ಸುತ್ತಿದ್ದ ಕಾಗದ ಮುಟ್ಟಿದ. ರಂಗಪ್ಪ ಹೇಳಿದ."ಇಷ್ಟೇ ಅಲ್ಲ. ಅತ್ಯಂತ ನಯವಾದ ಕಾಗದಬೇಕೆ? ಅದಕ್ಕೆ ಸೇರೋದು ಇನ್ನೂ ಇರುತ್ತೆ. ಅಂಟುಗುಣದ ರಾಳ, ಮೇಣ, ಒಣಗಿದ ಸಾಬೂನು ಇವೆಲ್ಲ ಸೇರಿಸುತ್ತೇವೆ. ಫಿಲ್ಲರ್ ಅಂತ ಸೇರಿಸುತ್ತೇವೆ. ಹಾಗೆಂದರೆ ಅಜೈವಿಕ ವಸ್ತುಗಳು. ಅವುಗಳಿಗೆ ಜಲನಿರೋಧಕ ಶಕ್ತಿ ಹೆಚ್ಚು"

"ಮತ್ತೆ ಕಾಗದ ಹರಿಯುತ್ತಲ್ಲ ಯಾಕೆ? ಗಣೇಶ ಪ್ರಶ್ನೆ ಹಾಕಿದ.

"ಹೌದಪ್ಪ ಹರಿಯದೆ ಇರೋದು ಏನಿದೆ ಹೇಳು. ಆದರೆ ಕಾಗದ ನೀರಲ್ಲಿ ಇಟ್ಟು ನೋಡು ಕದಡಿಕೊಳ್ಳುವುದಿಲ್ಲ. ನೆನೆದಿರುತ್ತದೆ ಅಷ್ಟೆ. ವಾರಗಟ್ಟಲೆ ನೀರಲ್ಲಿ ಬಿದ್ದರೂ ಪುನಃ ಎತ್ತಿ ಒಣಗಿಸಬಹುದು. ಆದರೂ ಅದು ಹರಿದಿರುವುದಿಲ್ಲ. ನಾವು ಎರಡೂ ಕೈಯಿಂದ ಎಳೆದರೆ ಹರಿಯುತ್ತೆ ಅಷ್ಟೆ. ಬರೆದದ್ದು, ಮುದ್ರಿಸಿದ್ದು ಕದಡಬಾರದು. ಹಾಳಾಗಬಾರದು ಅದಕ್ಕೆ ತಾನೆ ಇಷ್ಟೊಂದು ಉಪಚಾರ" ಎಂದು ರಂಗಪ್ಪ ನುಡಿದ.

ಆಗ ತಾನೇ ದೊಡ್ಡ ದೊಡ್ಡ ಕಾಗದದ ರೀಲುಗಳು ಸುತ್ತಿ ಸಿದ್ಧವಾಗಿದ್ದವು. ಒಂದುಕಡೆ ಚಿಕ್ಕ ಚಿಕ್ಕ ಅಳತೆಗೆ ರೀಲುಗಳಿಗೆ ಸುತ್ತುತ್ತಿದ್ದರು. ಮತ್ತೊಂದು ಕಡೆಯಲ್ಲಿ ಪ್ಯಾಕ್ ಮಾಡುತ್ತಿದ್ದರು. ಆಗಲೇ ಬಾಗಿಲಲ್ಲಿ ಲಾರಿ ಬಂದು ನಿಂತಿತ್ತು. ಕಾಗದವನ್ನು ಲಾರಿಗೆ ತುಂಬುತ್ತಿದ್ದರು. ಮತ್ತೊಂದು ಮೂಲೆಯಲ್ಲಿ ಹರಿದು ಚೂರು ಚೂರಾದ ಕಾಗದದ ರಾಶಿ ಇತ್ತು. ಹುಡುಗರು ಕೇಳಬಹುದಾದ ಪ್ರಶ್ನೆಯನ್ನು ಊಹಿಸಿಕೊಂಡು ರಂಗಪ್ಪನೇ ಉತ್ತರಿಸಿದ. "ಇಲ್ಲಿ ಹಾಳು ಅನ್ನುವ ಪದವೇ ಇಲ್ಲ, ಎಲ್ಲವೂ ಪುನಃ ಬಳಕೆ ಆಗುತ್ತದೆ".

ಕಾರ್ಖಾನೆ ಒಳಗಡೆಯೇ ದೂರದಲ್ಲಿ ಕಬ್ಬಿನ ಲಾರಿಗಳು ಕಾಣಿಸಿದವು. "ಓ ಅದೇನು ಇಲ್ಲಿ ಯಾಕೆ ಕಬ್ಬಿನ ಲಾರಿ. ಕಾಗದಕ್ಕೂ ಕಬ್ಬಿಗೂ ಏನು ಸಂಬಂಧ". ಎಂದು ರಮೇಶ ಕೇಳಿದ.

"ಏನ್ರೊ ನಿಮಗೆ ಗೊತ್ತಿಲ್ವಾ. ಅದು ಸಕ್ಕರೆ ಕಾರ್ಖಾನೆ. ಕಾಗದ ಕಾರ್ಖಾನೆಯೇ ಅದನ್ನೂ ನಡೆಸುತ್ತೆ. ಯಾಕೆ ಗೊತ್ತಾ. ಕಬ್ಬಿನ ಸಿಪ್ಪೆ ಕಾಗದ ತಯಾರಿಕೆಗೆ ಬಹಳ ಒಳ್ಳೆ ವಸ್ತು. ನೀವು ಬೆಳಿಗ್ಗೆ ನ್ಯೂಸ್ ಪೇಪರ್ ನೋಡಿದ್ರಲ್ಲ. ನ್ಯೂಸ್ ಪೇಪರ್‌ಗೆ ಈ ಸಿಪ್ಪೆ ಹೇಳಿ ಮಾಡಿಸಿದ ಹಾಗೆ. ನಮ್ಮ ಕಾರ್ಖಾನೇಲಿ ಅದನ್ನೂ ತಯಾರಿಸುತ್ತೇವೆ. ನಮಗೆ ಸಕ್ಕರೆ ಮುಖ್ಯ ಅಲ್ಲ. ಕಬ್ಬಿನ ಸಿಪ್ಪೆ ಮುಖ್ಯ. ಆದರೆ ಈ ಬಗೆಯ ಕಾಗದಕ್ಕೆ ತಡೆತದ ಶಕ್ತಿ ಇಲ್ಲ. ನ್ಯೂಸ್ ಪೇಪರ್ ನೋಡಿದ್ದೀರಲ್ಲ. ಐದಾರು ಜನ ಓದೋ ಹೊತ್ತಿಗೆ ಹರಿದು ಹೋಗಿರುತ್ತೆ. ನಮ್ಮ ದೇಶದಲ್ಲಿ ಸಾವಿರದೊಂಬೈನೂರ ಐವತ್ತೈದರ ವರೆಗೆ ಒಂದೇ ಒಂದು ಮುದ್ರಣ ಕಾಗದದ ಕಾರ್ಖಾನೆ ಇತ್ತು. ಈಗ ಈ ಸಂಖ್ಯೆ ಐದಕ್ಕೆ ಏರಿದೆ. ಮಧ್ಯಪ್ರದೇಶ, ಕೇರಳ, ತಮಿಳುನಾಡುಗಳಲ್ಲಿ ಈ ಬಗೆಯ ಕಾಗದ ಕಾರ್ಖಾನೆಗಳಿವೆ. ಇಷ್ಟಾದರೂ ನಾವು ನ್ಯೂಸ್‌ಪ್ರಿಂಟ್ ಆಮದು ಮಾಡಿಕೊಳ್ಳುತ್ತೇವೆ" ಹೀಗೆ ಹೇಳುತ್ತ ರಂಗಪ್ಪ ಅವರನ್ನು ಮನೆಗೆ ಕರೆದುಕೊಂಡು ಬಂದ.

ಸಂಜೆ ಕಾಫಿ ಕುಡಿದು ಆಯಿತು. ರಮೇಶ ನನಗೆ ಇನ್ನೊಂದಿಷ್ಟು ಮಾಹಿತಿ ಬೇಕಾಗಿವೆ ಎಂದು ಬೇಡಿಕೆ ಇಟ್ಟ. ಅವನು ಕೇಳಿದ ಮೊದಲ ಪ್ರಶ್ನೆ, ಕಾಗದದ ಶೋಧನೆ ಹಾಗೂ ಅದರ ಇತಿಹಾಸ. ರಂಗಪ್ಪ ಹೇಳತೊಡಗಿದ.

ಈಗಾಗಲೇ ಹೇಳಿರುವಂತೆ ಈಜಿಪ್ಟ್‌ನಲ್ಲಿ ಪ್ಯಾಪಿರಸ್ ಎಲೆಯಲ್ಲಿ ಬರೆದಿದ್ದರು. ಈ ಕಾಗದದ ಹೆಸರಿನ ಜೊತೆಗೆ ಟಾಯ್‌ಲುನ್ ಎಂಬ ಚೀನೀಯನ ಹೆಸರು ಇದೆ. ಆತ ಮೊದಲ ಕಾಗದದ ಜನಕ. ಕ್ರಿ.ಶ. ಒಂದನೇ ಶತಮಾನದಲ್ಲಿ ಸಂಶೋಧಿಸಿದ. ನಾರಿನ ಜಲಸಸ್ಯವನ್ನು ಜಜ್ಜಿ ಅರೆದ. ತಿರುಳನ್ನು ನಯಗೊಳಿಸಿದ. ತೆಳ್ಳನೆಯ ಶೋಧಕದ ಮೇಲೆ ಉಳಿಸಿದ ತಿರುಳನ್ನು ಒಣಗಿಸಿದ. ಹೆಚ್ಚು ಕಡಿಮೆ ನಾವು ತಿನ್ನುವ ಹಪ್ಪಳದ ರೀತಿ ಆಯ್ತು. ಆರಂಭದಲ್ಲಿ ಒರಟಾಗಿತ್ತು. ಬರಬರುತ್ತ ಕಾಗದ

ಸುಧಾರಣೆ ಕಂಡಿತು. ಕ್ರಿಸ್ತಶಕ ಒಂದುನೂರ ಐವತ್ತರ ಹೊತ್ತಿಗೆ ಹೆಚ್ಚಿನ ಜನ ತಯಾರಿಕೆಯಲ್ಲಿ ಹದ ಕಂಡುಕೊಂಡರು. ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿ ಎರಡನೇ ಶತಮಾನದ ಕಾಗದ ಇದೆ.

ಯುರೋಪ್ ಖಂಡಕ್ಕೂ ಕಾಗದ ಕಾಲಿಟ್ಟಿತು. ಹನ್ನೆರಡನೇ ಶತಮಾನದಲ್ಲಿ ಯುರೋಪಿಯನ್ನರು ಕಾಗದ ತಯಾರಿಕೆ ಕಲಿತರು. ನಂತರದ ನೂರಿನ್ನೂರು ವರ್ಷಗಳಲ್ಲಿ ಇತರ ಕಡೆಗಳಲ್ಲೂ ಕಾಗದ ತಯಾರಿಕೆ ಆರಂಭವಾಯಿತು.

ನಾರು ಗಿಡ, ಬಟ್ಟೆ, ಜೊತೆಗೆ ಹುಲ್ಲು, ಮರದ ಪುಡಿ, ಕಚ್ಚಾ ವಸ್ತುಗಳಾದವು. ಹತ್ತೊಂಬತ್ತನೇ ಶತಮಾನದಲ್ಲಿ ಗಟ್ಟಿಮರದ ಬಳಕೆ ಪ್ರಾರಂಭವಾಯಿತು. ಬೊಂಬು ಕೂಡ ಈಗ ಸೇರಿಕೊಂಡಿದೆ. ಇದಕ್ಕೆ ಎರಡು ಸಾವಿರ ವರ್ಷದ ಇತಿಹಾಸವಿದೆ. ಹೀಗೆ ಇನ್ನೂ ರಂಗಪ್ಪನ ವಿವರ ಸಾಗಿತ್ತು. ರಮೇಶ ಪ್ರಶ್ನಿಸಿದ ''ಅಲ್ಲಾ ಎಲ್ಲಾ ದೇಶದ ಹೆಸರು ಹೇಳಿದಿರಿ. ನಮ್ಮ ದೇಶದ ಹೆಸರೇ ಬರಲಿಲ್ಲ. ನಾವು ತಯಾರಿಸಿದ್ದು ಯಾವಾಗ?''

ರಂಗಪ್ಪ ನಕ್ಕು ಹೇಳಿದ ''ಹಾಂ! ನಾವು ಮಾಡಿದ್ದು ಇಷ್ಟೆ. ಇರೋದು ಕಡಿದು ನಾಶ ಮಾಡೋದು. ನೆಟ್ಟಗೆ ಇದ್ದದ್ದನ್ನು ಕೆಡವೋದು. ನಮ್ಮ ಹತ್ತಿರ ಎಲ್ಲಾ ಇದೆ ಅಂತ ಜಂಬಕೊಚ್ಚೋದು ಇಷ್ಟೆ'' ಮತ್ತೆ ಯೋಚಿಸಿದ ರಂಗಪ್ಪ ಹೇಳಿದ ''ಬಂಗಾಳದ ಸೆರಾಂಪುರ್ ಬಳಿ ಹತ್ತೊಂಬತ್ತನೆ ಶತಮಾನದ ಆರಂಭದಲ್ಲಿ ಮೊದಲ ಕಾಗದ ಕಾರ್ಖಾನೆ ಆಯಿತು. ಅದೂ ಬ್ರಿಟಿಷರಿಂದಾಗಿ.

ಕಲ್ಕತ್ತ ನಗರದಲ್ಲಿ ಸಾವಿರದ ಎಂಟನೂರ ಎಪ್ಪತ್ತರಲ್ಲಿ ಬ್ಯಾಲಿ ಮಿಲ್ಸ್ ಕಾರ್ಖಾನೆ ತೆರೆಯಲಾಯಿತು. ಸಾವಿರದ ಎಂಟನೂರ ಎಂಬತ್ತೊಂದರಲ್ಲಿ ಬಂಗಾಳದ ಟಾಘರ್ ಪೇಪರ್ ಮಿಲ್ಸ್ ತೆರೆಯಿತು. ಎರಡನೇ ಮಹಾ ಯುದ್ಧದ ವೇಳೆಗೆ ನಮ್ಮಲ್ಲಿ ಹದಿನೈದು ಕಾರ್ಖಾನೆಗಳು ಇದ್ದವು. ಈಗ ಒಟ್ಟು ಮುನ್ನೂರ ಇಪ್ಪತ್ತೈದು ಕಾಗದ ಕಾರ್ಖಾನೆಗಳಿವೆ. ಮಹಾರಾಷ್ಟ್ರ, ಬಂಗಾಳ, ಗುಜರಾತ್ ಇಲ್ಲಿ ಹೆಚ್ಚಿನ ಕಾರ್ಖಾನೆಗಳಿವೆ.

"ಕರ್ನಾಟಕದಲ್ಲಿ ಮುಖ್ಯವಾದ ಕಾರ್ಖಾನೆಗಳು ಯಾವುವು?"

"ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆಯೇ ಮೊದಲಿನದು. ಅದು ಸರ್ಕಾರಿ ವಲಯದ ಕಾರ್ಖಾನೆ. ಇತರೆ ಪ್ರಮುಖ ಕಾರ್ಖಾನೆಗಳು ದಾಂಡೇಲಿಯ ವೆಸ್ಟಕೋಸ್ಟ್ ಕಾಗದ ಕಾರ್ಖಾನೆ, ಮಂಡ್ಯ ನ್ಯಾಷನಲ್ ಕಾಗದ ಕಾರ್ಖಾನೆ, ದಕ್ಷಿಣ ಭಾರತ ಕಾಗದ ಕಾರ್ಖಾನೆ ಇವು ಮುಖ್ಯವಾದವು."

"ಕಾಗದವನ್ನು ಓದೋದಕ್ಕೆ ಬರೆಯೋದಕ್ಕೆ ಬಳಸುತ್ತಾರೆ. ಇದಲ್ಲದೆ ಇನ್ನೇನು ಇದರ ಬಳಕೆಗಳಿವೆ?

"ತುಂಬಾ ಒಳ್ಳೆ ಪ್ರಶ್ನೆ. ಯಾಕೆಂದರೆ ಜನರ ತಿಳುವಳಿಕೆಯಲ್ಲಿ ಕಾಗದದ ವೈವಿಧ್ಯಮಯ ಬಳಕೆಯ ಪರಿಚಯವೇ ಇಲ್ಲ. ದಪ್ಪ ಕಾಗದ, ರಟ್ಟು, ಒರಟು ಕಾಗದ, ಪ್ಯಾಕಿಂಗ್ ಕಾಗದ ಇವೆಲ್ಲಾ ಬೇಕು. ಈ ಬಗೆ ಕಾಗದ ಕೂಡ ಕಾರ್ಖಾನೆಗಳಲ್ಲೇ ತಯಾರಾಗಬೇಕು.

ಆಹಾರ ಪದಾರ್ಥ ಸುತ್ತಿ ಇಡಲು ಕೂಡ ಕಾಗದ ಬಳಸುತ್ತಾರೆ. ರಫ್ತು ಮಾಡುವಾಗ ವಸ್ತು ರಕ್ಷಣೆಗೆ ಕಾಗದ ಬಳಸುತ್ತಾರೆ. ಕಾಗದದಿಂದ ತಟ್ಟೆ ಲೋಟಗಳನ್ನೂ ಮಾಡುತ್ತಾರೆ. ಇವಕ್ಕೆಲ್ಲ ಮೇಣದ ಲೇಪನವಿರುತ್ತದೆ. ಬೆಣ್ಣೆ, ಮಾಂಸದ ತಿಂಡಿ, ಕೊಬ್ಬು ಇವನ್ನು ವಿಶೇಷ ಕಾಗದದಲ್ಲಿ ಇಡುತ್ತಾರೆ. ಕಾಗದದ ಮೇಲೆ ಹೊಳಪು ಬರುವ ಲೇಪನ ಬಳಿಯುತ್ತಾರೆ. ಶಿಲಾರಾಳ ಲೇಪಿತ ಕಾಗದ ಹರಿಯುವುದಿಲ್ಲ, ತೂತೂ ಬೀಳುವುದಿಲ್ಲ. ಉಷ್ಣ ತೇವ ಎಲ್ಲಾ ತಡೆಯುತ್ತದೆ.

ದಪ್ಪ ರಟ್ಟಿನ ಕಾಗದ ಅನೇಕ ಪದರ ಕೂಡಿ ಆಗಿವೆ. ಇದಕ್ಕೆ ರಾಸಾಯನಿಕ ಉಪಚಾರ ಕಡಿಮೆ. ಆದ್ದರಿಂದ ಕೆಳದರ್ಜೆಯ ಯಾಂತ್ರಿಕ ತಿರುಳು ಸಾಕು. ಹಳೆಕಾಗದ ರದ್ದಿ ಕಾಗದ ಪುನರ್ ಬಳಕೆಗೆ ಬರುತ್ತದೆ. ವೆಚ್ಚವೂ ಕಡಿಮೆ. ಇದನ್ನು ಸಂಗ್ರಹಿಸುವುದೂ ಸುಲಭ. ತಿರುಳಾಗಿ ಪರಿವರ್ತಿಸುವಾಗ ವೆಚ್ಚವೂ ಕಡಿಮೆ. ರಂಗಪ್ಪ ಇನ್ನೂ ಹೇಳುತ್ತಿದ್ದಂತೆ ಯಾರೋ ಒಳಗಡೆ ಬಂದರು. ಬಂದಾತ ರಂಗಪ್ಪನ ಗೆಳೆಯ ವೇಣು.

ಇಬ್ಬರೂ ಒಂದೇ ಪ್ರಯೋಗ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ವೇಣು ರಂಗಪ್ಪನನ್ನು ಎಚ್ಚರಿಸಿದ. ''ಏನು ಮಹರಾಯ ಇನ್ನೂ ಇಲ್ಲೇ ಇದ್ದೀಯಾ. ಸಂಘದ ಕಛೇರಿ ಕಡೆ ಬರೋಲ್ಲವೆ'' ರಂಗಪ್ಪ ಹೊರಟಾಗ ಸುರೇಶ, ಗಣೇಶ ನಾವೂ ಬರುತ್ತೇವೆ ಎಂದು ತರಲೆ ಹೂಡಿದರು. ಅವರಿಗೆ ಏನೇನೋ ಹೇಳಿ ಸಾಗು ಹಾಕಿ ರಮೇಶನನ್ನು ಕರೆದು ಕೊಂಡು ಹೊರಟರು.

ಪರಿಸರ ಪ್ರೇಮಿಗಳ ಸಂಘದ ಬಾಗಿಲು ತೆರೆದಿತ್ತು. ಒಳಗಡೆ ಐದಾರು ಜನ ಹರಟೆ ಹೊಡೆಯುತ್ತಿದ್ದರು. ರಂಗಪ್ಪ, ರಮೇಶನನ್ನು ವೇಣುಗೆ ಪರಿಚಯಿಸಿದ. ''ರಮೇಶ, ಇನ್ನೂ ಏನಾದರೂ ಕೇಳುವುದಿದ್ದರೆ ವೇಣುವನ್ನು ಕೇಳಿಬಿಡು . ನನಗೂ ಹೇಳಿದ್ದು ಸಾಕು ಅನಿಸಿದೆ'' ಎಂದು ಕುರ್ಚಿಗೆ ಒರಗಿದ.

''ಸಾರ್, ಇನ್ನೇನಿಲ್ಲ, ಪರಿಸರ ಪ್ರೇಮಿಗಳ ಸಂಘ ಅಂತ ನೀವು ಮಾಡ್ಕೊಂಡಿದೀರಿ. ನೀವು ಏನಾದರೂ ಸಾಧನೆ ಮಾಡೋಕೆ ಆಗಿದೆಯಾ? ಆದರಲ್ಲೂ ಕಾಗದ ಕಾರ್ಖಾನೆಯಲ್ಲಿ ನೀವು ಈ ಸಂಘ ಮಾಡಿದ್ದೀರಿ. ಕಾಗದ ತಯಾರಿಕೆಯಿಂದ ನಿಜವಾಗಿಯೂ ಪರಿಸರ ಹಾಳಾಗುತ್ತಿಲ್ಲವೆ'' ಎಂದು ರಮೇಶ ಕೇಳಿದ. ವೇಣುಗೆ ಮಾತು ತುಂಬಾ ಇಷ್ಟ. ಆಸಕ್ತಿ ಕುತೂಹಲ ಇರೋರಿಗೆ ಚೆನ್ನಾಗಿ ಇಷ್ಟವಾಗುತ್ತಾನೆ. ನೇರವಾಗಿ ಶುರುಮಾಡಿದ.

''ನೋಡು ಮರಿ, ನಾವೂ ಏನೂ ಸಾಧನೆ ಮಾಡೋಕ್ಕಾಗಿಲ್ಲ. ಆದರೆ ನಂಬಿಕೆ ಕಳಕೊಂಡಿಲ್ಲ. ಮೊನ್ನೆ ಸ್ಮಶಾನದಲ್ಲಿ ನೂರು ಗಿಡಮರ ನೆಟ್ಟಿದ್ದೇವೆ. ನೀರು ಹನಿಸುತ್ತಿದ್ದೇವೆ. ಉಚಿತವಾಗಿ ಗಿಡಗಳನ್ನು ಲಾರಿಯಲ್ಲಿ ಒಯ್ದು ಜನರಿಗೆ ಹಂಚಿದ್ದೇವೆ. ನಮ್ಮ ಕಾರ್ಖಾನೆ ಪರಿಸರ ಹಾಳು ಮಾಡುತ್ತೆ. ಆದ್ರೆ ಏನು ಮಾಡೋದು. ಜೀವನಕ್ಕೆ ಅದನ್ನೇ ಅವಲಂಬಿಸಿದ್ದೇವೆ. ಕಾಡನ್ನು ನಂಬಿ ಈ ಕಾರ್ಖಾನೆ ನಿಂತಿದೆ. ದಿನ ಬೆಳಗಾದರೆ ಗಿಡ ಮರಗಳ ಕೊಲೆ. ಒಂದು ಕಾರ್ಖಾನೆಗಾಗಿ ಪ್ರತಿದಿನ ಮೂರು ಹೆಕ್ಟೇರ್ ದಟ್ಟ ಕಾಡು ನಾಶವಾಗುತ್ತದೆ. ಕತ್ತರಿಸಿದ ಜಾಗದಲ್ಲಿ ಮತ್ತೆ ಕಾಡು ಬೆಳೆಯಲು ಏಳು ವರ್ಷಬೇಕು. ನಷ್ಟವನ್ನು ಎಲ್ಲಿಂದ ತುಂಬುವುದು? ಕಾರ್ಖಾನೆಯಲ್ಲಿ ಏನು

ಬೇಕಾದರೂ ತಯಾರಿಸಬಹುದು. ಸಕಲ ಜೀವ ರಾಶಿಗೆ ಬೇಕಾದ ಮರ ತಯಾರು ಮಾಡಲು ಸಾಧ್ಯವೆ? ದೇಶದಲ್ಲಿ ಮುನ್ನೂರಕ್ಕೂ ಹೆಚ್ಚು ಕಾರ್ಖಾನೆ ಇವೆ. ಅವಕ್ಕೆಲ್ಲಾ ಕಾಡು ಹೇಗೆ ಸಿಗಬೇಕು. ಬೊಂಬು ಈಗಾಗಲೇ ವಿರಳವಾಗಿದೆ. ಸಣ್ಣ ಕಾರ್ಖಾನೆ ಕಡಿಮೆ ಬಳಸಬಹುದು. ಒಟ್ಟಿನಲ್ಲಿ ನಾಶ ನಾಶವೇ. ನಾಶದ ಹಿಂದೆ ಸೃಷ್ಟಿ ಇರಬೇಕು.''

''ಈಗ ನಮಗೆ ಏನಾಗಿದೆ? ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ. ಕಾಡೂ ಉಳಿಯಬೇಕು. ಕಾಗದವೂ ಉಳೀಬೇಕು. ಕಡಿದ ಜಾಗದಲ್ಲಿ ಪುನಃ ಮರ ಬೆಳೆಯಬೇಕು. ಮಿತ ಬಳಕೆ ಎಲ್ಲದರಲ್ಲೂ ಬೇಕು. ಅಮೆರಿಕಾ, ಇಂಗ್ಲೆಂಡ್, ಜರ್ಮನಿ, ಜಪಾನ್ ಈಗ ಹೆಚ್ಚು ಕಾಗದ ಬಳಸುವ ದೇಶಗಳು. ಅಲ್ಲಿ ಸರಾಸರಿ ತಲಾ ಎರಡುನೂರು ಕೆ.ಜಿ ಬಳಸುತ್ತಾರೆ. ನಮ್ಮ ಬಳಕೆ ಎಷ್ಟು ಗೊತ್ತೆ? ವರ್ಷಕ್ಕೆ ಸರಾಸರಿ ಕೇವಲ ಎರಡು ಕೆ.ಜಿ! ಈ ಲೆಕ್ಕದಲ್ಲಿ ನಾವೇ ವಾಸಿ. ಅಭಿವೃದ್ಧಿ ಲೆಕ್ಕಾಚಾರದಲ್ಲಿ ನಾವು ಹಿಂದೆ ಬಿದ್ದಂತೆ ಕಾಣುತ್ತೇವೆ ಅಷ್ಟೆ'' ರಮೇಶನಿಗೂ ವೇಣುವಿನ ಮಾತು ಕೇಳುತ್ತ ತನ್ನ ಊರಿನ ಸಂಗತಿಗಳು ನೆನಪಾಗ ತೊಡಗಿದವು. ನೋಟ್ ಪುಸ್ತಕ ಇಲ್ಲದ ಕಾರಣ ಶಾಲೆ ಬಿಟ್ಟು ಹುಡುಗರು, ಶಿಕ್ಷಣವೇ ಇಲ್ಲದ ಕುಟುಂಬಗಳು. ಹೌದು ಅದಕ್ಕೆ ನಾವು ಬಳಸುವ ಕಾಗದ ಕಡಿಮೆ. ಈ ನಗರ ವಾಸಿಗಳೇ ಹೆಚ್ಚು ಕಾಗದ ಬಳಸುವವರು. ಆದರೆ ಪೋಲು ಮಾಡಬಾರದು. ಈ ವಿಚಾರ ಅವನನ್ನು ಕಾಡಿಸಿದವು.

ರಮೇಶ ಮತ್ತೆ ವೇಣು ಕಡೆ ನೋಡುತ್ತ ಕೇಳಿದ. ''ಸಾರ್, ಕಾರ್ಖಾನೆ ಪರಿಸರ ಹಾಳುಮಾಡುತ್ತಿದೆ. ನಿಮಗೂ ಗೊತ್ತಿದೆ, ಕಾರ್ಖಾನೆಯೇ ಇದನ್ನು ತಡೆಗಟ್ಟಲು ಯೋಜನೆ ಹೊಂದಿದೆಯೆ?'' ವೇಣು ತಲೆ ಆಡಿಸಿದ. ''ಇಲ್ಲ ಮರಿ, ಈ ಕಾರ್ಖಾನೆಗಳು ನದಿ ದಡ ಬಿಟ್ಟು ಕದಲುವುದೇ ಇಲ್ಲ. ಯಾಕೆಂದರೆ ನೀರು ಭಾರೀ ಪ್ರಮಾಣದಲ್ಲಿ ಬೇಕು. ಕಾಗದ ಒಣಗುವ ಹಂತದ ವರೆಗೆ ಪ್ರತಿ ಸೆಕೆಂಡಿನಲ್ಲೂ ನೀರು ಬಳಸುತ್ತೇವೆ. ಬಳಸಲಿ. ಚಿಂತೆ ಇಲ್ಲ. ಆದರೆ ರಾಸಾಯನ ಮಿಶ್ರಿತ ನೀರು ಅತಿ ಮುಖ್ಯ ಸಮಸ್ಯೆ. ಇಲ್ಲಿ ಬಳಸುವ ಸಲ್ಫೇಟ್ ಅನಾರೋಗ್ಯಕ್ಕೆ ದಾರಿ ಮಾಡುತ್ತದೆ. ನೀರನ್ನು ಪುನಃ ಶುಚಿಗೊಳಿಸಿ ನದಿಗೆ ಬಿಡಬೇಕೆಂಬ ನಿಯಮಗಳಿವೆ. ಕಾರ್ಖಾನೆಗಳು ಅದನ್ನು

ಪೂರೈಸಿದ್ದೇವೆ ಎನ್ನುತ್ತವೆ. ಅದಕ್ಕೆ ಯಂತ್ರಗಳನ್ನು ತೊಟ್ಟಿಗಳನ್ನೂ ಹೊಂದಿರುತ್ತಾರೆ. ಆದರೆ ನೀರು ಕಲುಷಿತವಾಗೇ ಹರಿಯುತ್ತದೆ. ಇಂತಹ ಕಡೆ ಮೀನುಗಳು ಬದುಕುವುದಿಲ್ಲ. ದನ ಕರು ನೀರು ಕುಡಿಯುವುದಿಲ್ಲ. ಮಾನವ ನೀರು ಬಳಸಲಾಗುವುದಿಲ್ಲ. ನೀರು ಬಳಸಿದರೆ ಚರ್ಮ ತುರಿಕೆ ಆರಂಭವಾಗುತ್ತದೆ.'' ಎಂದು ವೇಣು ಹೇಳಿದ.



ರಮೇಶ ಕತ್ತೆತ್ತಿ ಮೇಲೆ ನೋಡಿದ. ಕಾಡೆಮ್ಮೆಯ ಭಾರೀ ತಲೆ ಕೊಂಬು ಸಮೇತ ಗೋಡೆಯಲ್ಲಿ ಅಲಂಕರಿಸಿತ್ತು. ವೇಣು, ರಮೇಶ ನೋಡುತ್ತಿರುವುದನ್ನು ಗಮನಿಸಿದ. ''ರಮೇಶ, ನೀನು ನೋಡುತ್ತಿದ್ದೀಯಲ್ಲ ಆ ಸಂತತಿಯೇ ಈಗ ಇಲ್ಲ. ನಮ್ಮ ಸಮೀಪದ ಭದ್ರಾ ಅಭಯಾರಣ್ಯದಲ್ಲಿ ಒಮ್ಮೆ ಕಾಡೆಮ್ಮೆಯ ಜನಗಣತಿ ಮಾಡಿದ್ದರು. ಇಪ್ಪತ್ತು ಸಾವಿರದಷ್ಟು ಇದ್ದವು. ಈಗ ಉಳಿದಿರೋದು ಬರೀ ಬುರುಡೆ ಹಾಗೂ ಕೊಂಬುಗಳು. ಅವಕ್ಕೆ ಜಾಗವೇ ಇಲ್ಲದಂತಾಯಿತು. ಅವುಗಳ ಆಹಾರವನ್ನು ನಮ್ಮ ಕಾರ್ಖಾನೆಗಳು ಕಬಳಿಸಿದವು'' ಎಂದು ದೊಡ್ಡ ನಿಟ್ಟುಸಿರು ಬಿಟ್ಟ.

ರಂಗಪ್ಪ ಮನೆಗೆ ಹೊರಡುತ್ತ, "ನಾಳೆ ಇವರಿಗೆ ಊರು ತೋರಿಸಬೇಕಪ್ಪ ನಾಡಿದ್ದು ಊರಿಗೆ ಹೊರಡುತ್ತಾರೆ" ಎಂದ. ಮನೆಗೆ ಬರುವಾಗ ರಮೇಶ ಹೆಚ್ಚು ಮಾತನಾಡಲಿಲ್ಲ. ಅವನ ತಲೆಯಲ್ಲಿ ಏನೇನೋ ಯೋಚನೆಗಳು . ಬೆಳಗ್ಗೆ ಎದ್ದು ಮೂತ್ರ ವಿಸರ್ಜನೆಗೆ ಬಾಗಿಲಿಗೆ ಬಂದ ಗಣೇಶ ಹಾಗೇ ಮೈದಾನದಲ್ಲಿ ನಡೆದಾಡಿದ. ಇದ್ದಕ್ಕಿದ್ದಂತೆ ಗಾಳಿ ಭರ್ರೋ ಎಂದು ಬೀಸಿತು. ಅವನ ಮೈ ಕೈ ಎಲ್ಲಾ ಬಿಳಿ ಬೂದಿ ಮೆತ್ತಿಕೊಂಡಿತು. ಕಣ್ಣು ಉಜ್ಜಿ ಎದುರಿಗೆ ನೋಡಿದ. ಸಾವಿರಾರು ದೊಡ್ಡದೊಡ್ಡ ಹಿಟ್ಟಿನಂತಹ ಗುಡ್ಡೆ ಕಾಣಿಸಿದವು. ಅವು ಏನೆಂದು ಗೊತ್ತಾಗಲಿಲ್ಲ. ಉಜ್ಜಿ ಉಜ್ಜಿ ಕಣ್ಣು ಕೆಂಪಾಯಿತು. ಕೋಮಲಳ ಬಳಿ ಬಂದು 'ಅವೆಲ್ಲಾ ಏನಕ್ಕ' ಎಂದು ಕೇಳಿದ ಕೋಮಲ ತಮ್ಮನಿಗೆ 'ಅಯ್ಯೋ ಮಹರಾಯ ಇನ್ನೂ ನಿನಗೆ ಈ ಊರಿನಲ್ಲಿ ಏನೇನು ಅನಿಷ್ಟಗಳಿವೆ ಅಂತ ಗೊತ್ತಿಲ್ಲ ನಿಮ್ಮ ಭಾವನನ್ನು ಕೇಳು ಹೇಳ್ತಾರೆ' ಎಂದಳು.

ರಂಗಪ್ಪ ಅವನ ಅವಾಂತರ ನೋಡಿ ಕೈಕಾಲು ತೊಳೆಸಿ ಕಾರಣ ಹೇಳಿದ. 'ಅವೆಲ್ಲಾ ಸುಣ್ಣದ ಗುಡ್ಡೆಗಳು. ಕಾಗದ ತಯಾರಿಸಲು ಸುಣ್ಣ ಬೇಕು. ಬಳಸಿದ ಸುಣ್ಣ ಪೂರಾ ಹಾಳಾಗಿರುವುದಿಲ್ಲ. ನಾಶವೂ ಆಗಿರುವುದಿಲ್ಲ. ಆದರೆ ಅದು ಉಪಯೋಗಕ್ಕೆ ಬರೋಲ್ಲ. ತಂದು ತಂದು ಇಲ್ಲೇ ಸುತ್ತ ಮುತ್ತ ಸುರೀತಾರೆ. ದೂರಕ್ಕೆ ಮೊದಲು ಸುರಿದಿರುತ್ತಾರೆ. ಜನ ಸಂಖ್ಯೆ ಹೆಚ್ಚಾಗುತ್ತೆ. ಸರಿ ಮನೆಗಳನ್ನು ಅಲ್ಲೂ ಕಟ್ಟಬೇಕಾಗುತ್ತೆ. ಈಗ ಎಷ್ಟೋ ವಾಸಿ ಡಿಸೆಂಬರ್, ಜನವರಿ ತಿಂಗಳಲ್ಲಿ ನೋಡಬೇಕು ಮೂಡಲ ಗಾಳಿಗೆ ಧೂಳಿನ ಮೋಡವೇ ಇಲ್ಲಿ ಕವಿಯುತ್ತೆ. ಶಾಂತವಾಗಿದ್ದಾಗ ನೋಡೋಕೆ ಒಂದು ಥರ ಶಿವನ ಕೈಲಾಸ ಪರ್ವತ ಕಂಡಂತೆ ಕಾಣುತ್ತೆ. ಆದರೆ ಅಲ್ಲಿ ವಾಸಮಾಡೋರು ಯಾರು ಗೊತ್ತಾ? ಶಿವ ಅಲ್ಲ, ನಾಯಿ, ಹಂದಿ, ಕತ್ತೆ.'

ಬೆಳಿಗ್ಗೆ ರಮೇಶನಿಗೆ ಯಾಕೋ ಒಂದು ತರಹ ಕಸಿವಿಸಿ ಆಯಿತು. ಕಾರ್ಖಾನೆ ಕಟ್ಟುತ್ತೇವೆ. ಕಾರ್ಖಾನೆಗೆ ಚಿಮಣಿ ಏರಿಸುತ್ತೇವೆ. ಅದರಿಂದ ಗಾಳಿ ಮಲಿನವಾಗುತ್ತದೆ. ಥಳ ಥಳ ಹೊಳೆಯುತ್ತ ಹರಿಯುವ ನದಿ ಕಂದು ಬಣ್ಣಕ್ಕೆ ತಿರುಗುತ್ತದೆ. ಇದಕ್ಕೆಲ್ಲ

ಪರಿಹಾರವಿಲ್ಲವೆ ಎಂದು ಯೋಚಿಸಿದ. ಕೋಮಲ ಕಾಫಿ ಕುಡಿಬಾರೋ ತಣ್ಣಗಾಗುತ್ತೆ ಎಂದು ಕೂಗಿದಳು. ಮೆಲ್ಲನೆ ಒಳಗೆ ನಡೆದ.

ನಾವು ಅಭಿವೃದ್ಧಿ ಹೊಂದುವುದೇ ಪ್ರಗತಿ. ಕಾಗದದ ರೀತಿಯ ಎಲೆಗಳಲ್ಲಿ ಮಾನವ ಲಿಪಿ ಬರೆದ. ಆಗ ಅವನ ಅಗತ್ಯ ಕಡಿಮೆ ಇದ್ದವು. ಚೀನೀಯರು ಕಾಗದ ಕಂಡುಕೊಂಡರು. ಎರಡು ಸಾವಿರ ವರ್ಷ ಕಳೆದವು. ಈಗ ಜಗತ್ತು ಬದಲಾಯಿಸಿದೆ. ಆಗ ಇದ್ದ ಮಿತಿಗಳಿಗೆ ಈಗ ತಡೆಯೇ ಇಲ್ಲ. ನಾಗರೀಕತೆಯ ಬಲೆ ಹೆಣೆದುಕೊಂಡಿದ್ದೇವೆ. ಪೈಪೋಟಿ ನಡೆಸುತ್ತಿದ್ದೇವೆ. ಅರಿವು ಹೆಚ್ಚಿದೆ.

ಈ ಕ್ರಾಂತಿಯಲ್ಲಿ ಕಾಗದದ ಪಾತ್ರ ಬಲು ದೊಡ್ಡದು. ಚಂದ್ರಹಾಸನ ಕತೆ ನೀವು ಕೇಳಿದ್ದೀರಿ. ದುಷ್ಟಬುದ್ಧಿ ಚಂದ್ರಹಾಸನನ್ನು ಕೊಲ್ಲಲು ಕಾಗದ ಬರೆದ. ಅದರಲ್ಲಿ ಮಗನಾದ ಮದನನಿಗೆ ವಿಷವನ್ನು ಕೊಡು ಎಂದು ತಿಳಿಸಿದ್ದ. ಮದನನ ಕೈಗೆ ಕಾಗದ ಸಿಗುವುದರೊಳಗೆ ವಿಷ 'ವಿಷಯೆ' ಆಗಿತ್ತು. ತಂಗಿಯನ್ನು ಕೊಟ್ಟು ಮದುವೆ ಮಾಡಿದ. ಕಾಗದ ದುಷ್ಟ ಬುದ್ಧಿಗೆ ಕೈಕೊಟ್ಟಿತು. ಕಾಗದ ವಿಷಯೆಗೆ ಗಂಡನನ್ನು ತಂದುಕೊಟ್ಟಿತು. ಕಾಗದ ಮದನನಿಗೆ ಕರ್ತವ್ಯ ತೋರಿಸಿತು. ಕಾಗದ ಚಂದ್ರಹಾಸನಿಗೆ ಭಾಗ್ಯದ ಬಾಗಿಲು ತೆರೆಸಿತು. ಕಾಗದ ಒಂದೇ. ಗತಿಗಳು ಹಲವಾರು.


ಕಾಗದ ಮಂಗನ ಕೈಯ್ಯಲ್ಲಿ ಕೊಟ್ಟ ಮಾಣಿಕ್ಯವಾಗಬಾರದು. ಅದು ಎಲ್ಲರ ಬದುಕಿಗೆ, ಅರಿವಿಗೆ, ತಿಳಿವಿಗೆ ದಾರಿ ಆಗಬೇಕು. ಅದನ್ನು ತಯಾರಿಸುವಾಗ ಪರಿಸರದ ಗಮನವೂ ಮುಖ್ಯ. ಬಸ್ಸು ಮಾರ್ಕೆಟ್ ಹತ್ತಿರ ನಿಂತಿತು. ಹುಡುಗರು 'ಭಾವ, ಎಲ್ಲಿ ಇಳಿಯಬೇಕು' ಎಂದು ಕೇಳಿದರು. ತಡಬಡಾಯಿಸಿ ಇಳಿದರು. ಗಣೇಶ ಭದ್ರಾನದಿ ನೋಡಬೇಕೂಂತ ಕುಣಿದಾಡುತ್ತಿದ್ದ. ಅವನು ನದಿಯನ್ನು ನೋಡೇ ಇರಲಿಲ್ಲ. ಹಳ್ಳ ತೊರೆಗಳನ್ನು ಮಾತ್ರ ನೋಡಿದ್ದ. ಕುತೂಹಲದಿಂದ ಸೇತುವೆಯ ಎರಡೂ ಬದಿ ಇಣುಕಿ ನೋಡಿದ. ನೀರು ಕಾಣಲೇ ಇಲ್ಲ. ಬರೀ ಬಗ್ಗಡ. ಅವನಿಗೆ ಗಾಬರಿಯಾಯಿತು. ಕಪ್ಪಗೆ ನೀರು ಹರಿಯುತ್ತಿತ್ತು. ನೀರಿನಲ್ಲಿ ಬುರುಗು ನೊರೆ ಮಾತ್ರ ಇತ್ತು. ನೀರೂ ಕೂಡ ಅಳುತ್ತ ಹರಿದಂತೆ ಕಂಡಿತು. ತುಂಬಾ ನಿರಾಶೆಯಾಯಿತು. ಯಾವುದೋ

ಕಾರಣದಿಂದ ಸಗಣಿ ಗೋಮೂತ್ರ ಬೆರೆತಿದೆ ಅನಿಸಿತು. 'ಕೋಮಲಕ್ಕ, ಈ ಊರಲ್ಲಿ ಎಮ್ಮೆ ಹಸು ಜಾಸ್ತಿನಾ ನೀರು ಹೀಗಿದೆಯಲ್ಲ' ಎಂದ. ಕೋಮಲ ರಂಗಪ್ಪನ ಮುಖ ನೋಡಿ ನಿಮ್ಮ ಭಾವನ್ನ ಕೇಳು. ತಡವಾಗಿ ಬಂದ ದಿನ ಯಾಕೆ ತಡ ಅಂತ ಕೇಳೋ ಹಾಗೇ ಇಲ್ಲ. ಬಣ್ಣ ಕೆಟ್ಟಿತ್ತು, ಕಾಗದ ಕೆಟ್ಟಿತ್ತು. ಕೆಮಿಕಲ್ಸ್ ಕೆಟ್ಟಿತ್ತು ಅಂತಾರೆ ಅಷ್ಟೇ ಅಲ್ಲ, ಇದನ್ನು ಕೆಡಿಸಿದೋರು ಯಾರೂ ಅಂತಾನು ಕೇಳು' ಎಂದು ಮುಖ ಸೊಟ್ಟಗೆ ಮಾಡಿಕೊಂಡಳು.

ರಂಗಪ್ಪನಿಗೆ ತಾನು ಏನೂ ತಪ್ಪು ಮಾಡಿಲ್ಲಾಂತ ಗೊತ್ತು. ಆದರೆ ಮನಸ್ಸು ಏನೋ ಅಪರಾಧ ಮಾಡಿದಂತೆ ಮುದುಡಿತ್ತು. ಮಕ್ಕಳಿಗೆ ಸಿನೆಮಾ ತೋರಿಸಿ, ತಿಂಡಿತಿನ್ನಿಸಿ ಬಸ್ಸು ಹತ್ತಿಸಲು ಕೋಮಲ ರಂಗಪ್ಪ ಇಬ್ಬರೂ ಬಸ್ ನಿಲ್ದಾಣಕ್ಕೆ ಬಂದರು. ರಮೇಶ ರಂಗಪ್ಪನ ಹತ್ತಿರ ಬಂದು 'ತುಂಬಾ ಸಹಾಯ ಆಯ್ತು ಭಾವ. ತುಂಬಾ ವಿಷಯ ತಿಳಿದುಕೊಂಡೆ. ನಾನು ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಖಂಡಿತ ಗೆಲ್ಲುತ್ತೇನೆ' ಎಂದ. ಸುರೇಶ, ಗಣೇಶ ಬಸ್ಸು ಹತ್ತಿದವರು ಕೆಳಗಿಳಿದು ಬಂದು ಕೋಕಿಲಳ ಕೈಲಿದ್ದ ಚಾಕೋಲೇಟ್ ಕಸಿದುಕೊಂಡು ರೇಗಿಸಿದರು. ಸುರೇಶ ಬಸ್ಸು ಹೊರಡುತ್ತಿದ್ದಂತೆ ಕೈ ಬೀಸಿದ.

ಕಾಗದ ಚೀನಾದಲ್ಲಿ ಶೋಧನೆಯಾಯಿತು. ಎರಡು ಸಾವಿರ ವರ್ಷದಿಂದ ಮಾನವರ ಮನಸ್ಸನ್ನು ಅರಳಿಸಿದೆ. ಬುದ್ಧಿಯನ್ನು ಹರಿತಗೊಳಿಸಲು ನೆರವಾಗಿದೆ. ಇದಕ್ಕೆ ಮಹತ್ವ , ದುರಂತ ಎರಡೂ ಇದೆ ಎನಿಸಿತು. ಪರಿಮಳ ಕೊಡುವ ಗುಲಾಬಿ ಕಣ್ಣಿಗೆ ಕಟ್ಟುತ್ತದೆ. ಪರಿಮಳ ಮನದಲ್ಲಿ ಉಳಿಯುತ್ತದೆ. ಗುಲಾಬಿ ಬಾಡುತ್ತದೆ. ಬಾಡಿದ್ದನ್ನು ಯಾರೂ ಗಮನಿಸುವುದಿಲ್ಲ. ಕಾಗದದ ಕತೆಯೂ ಹಾಗೆಯೇ.

***



ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ [illegible] ನಿರ್ಮಾಣ [illegible]ಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ [illegible] ಮೊದಲ ಪ್ರಯತ್ನವಾ[illegible] ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸು[illegible]ಗ ಬೆಂ[illegible]ಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ[illegible]ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು [illegible]ಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್[illegible]ಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷ[illegible]ನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ[illegible]ಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, [illegible]ುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿ[illegible] ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನು[illegible]ಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡ[illegible] ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟು[illegible]ಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು [illegible]ಂಡು ಅವರಿಗೆ ಕಮ್ಮಟಗಳನ್ನು ನಡೆಸಿ, [illegible]ನ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ[illegible] ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯು[illegible]ವವರಿಂದ ಅದರ ಗುಣದೋಷಗಳ ಬಗ್ಗೆ ಅಭಿ[illegible]ಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳ[illegible]ಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿ[illegible]ಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್[illegible]ಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮ[illegible]ೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ [illegible]ುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿ[illegible] ಪುಸ್ತಕ ರಚನೆಗೆ ತೊಡಗಲಾ[illegible]ತು; [illegible]ಲೇಖಕರು ನಮ್ಮ ವಿಶ್ವವಿದ್ಯಾಲಯದ [illegible] ಹಸ್ತಪ್ರತಿಗಳಿಗೆ [illegible] ರೂಪ ಕೊಟ್ಟರು. ಕಲಾವಿದರು ವಿಷಯ[illegible]ಗೊಪ್ಪ[illegible]. [illegible] ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು